# ಧೈರ್ಯದ ದಾರಿ

ನಿಮ್ಮ ನಂಬಿಕೆಯ ಧ್ವನಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

EMAIL : dairyadadaari@gmail.com ಸಂಪುಟ: 01 ಸಂಚಿಕೆ: 46

ಬೆಲೆ ರೂ : 2.00

ರಾಯಚೂರು

ಪುಟ: 4

RNI NO: KNKAN/25/A2795 ಶನಿವಾರ: 24-01-2026



ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626


# ಪರಿಷತ್‌ನಲ್ಲಿ ಗದ್ದಲ, ಕೋಲಾಹಲ

**ಬೆಂಗಳೂರು,ಜ.23**–ವಿಧಾನ ಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿ, ರಾಜ್ಯಪಾಲರು ತೆರಳುವ ಸಂದರ್ಭದಲ್ಲಿ ಆಡಳಿತ ಪಕ್ಷದ ಸದಸ್ಯರು ವರ್ತನೆ ವಿಚಾರ ವಿಧಾನ ಪರಿಷತ್ತಿನಲ್ಲಿಂದು ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ, ಗದ್ದಲ ಕೋಲಾಹಲ ಉಂಟಾಗಿ ಸಭಾಪತಿ ಬಸವರಾಜ ಹೊರಟ್ಟಿಯವರು ಎರಡು ಬಾರಿ ಕಲಾಪವನ್ನು ಮುಂದೂಡಿದರು.

ಮೇಲ್ಮನೆಯಲ್ಲಿಂದು ಕಲಾಪ ಆರಂಭವಾಗುತ್ತಿದ್ದಂತೆ ಕೂಡಲೇ ಸಭಾಪತಿ ಬಸವರಾಜ ಹೊರಟ್ಟಿ ಅವರು ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರಿಗೆ ತಮಗೆ ನೀಡಿರುವ ಪತ್ರದ ಸಂಬಂಧ ಮಾತನಾಡಲು ಅವಕಾಶ ನೀಡಿದಾಗ ಆಡಳಿತ ಪಕ್ಷದ ಬಿ.ಕೆ. ಹರಿಪ್ರಸಾದ್ ಅವರು ಕ್ರಿಯಾ ಲೋಪ ಎತ್ತಿದಾಗ ಸಭಾಪತಿ ಅವಕಾಶ ನೀಡಿದರು.

ಇದನ್ನು ವಿರೋಧಿಸಿ ಪ್ರತಿಪಕ್ಷದ ಸದಸ್ಯರು ಮಾತನಾಡಲು ಅರಂಭಿಸಿದಾಗಲೇ ಕ್ರಿಯಾ ಲೋಪಕ್ಕೆ ಹೇಗೆ ಅವಕಾಶ ಕೊಡುವಿರಾ ಎಂದು ವಿರೋಧ ವ್ಯಕ್ತಪಡಿಸಿದರು.

ಕ್ರಿಯಾ ಲೋಪ ಏನಿದೆ ಎನ್ನುವುದು ಮೊದಲು ಕೇಳೋಣ ಬಳಿಕ ಪ್ರತಿಪಕ್ಷದ ನಾಯಕರಿಗೆ ಅವಕಾಶ ಮಾಡಿಕೊಡೋಣ ಎಂದು ಸಭಾಪತಿ ಹೇಳಿದರು.

ಇದನ್ನು ವಿರೋಧಿಸಿದ ಪ್ರತಿಪಕ್ಷದ ಸದಸ್ಯರು ಪ್ರತಿಪಕ್ಷದ ನಾಯಕರ ವಿಷಯ ಪ್ರಸ್ತಾಪಕ್ಕೆ ಅವಕಾಶ ನೀಡಿ ಬಳಿಕ ಕ್ರಿಯಾ ಲೋಪ



ಎತ್ತಲು ಅವಕಾಶ ನೀಡಿ ಎಂದು ಕಾಂಗ್ರೆಸ್‌ಗೆ ಧಿಕ್ಕಾರ ಗೂಂಡಾಗಿರಿ ಸರ್ಕಾರ ಎಂದು ಘೋಷಣೆ ಕೂಗತೊಡಗಿದರು.

ಇದಕ್ಕೆ ಪ್ರತಿಯಾಗಿ ಆಡಳಿತ ಪಕ್ಷದ ಸದಸ್ಯರು ಪ್ರತಿ ಘೋಷಣೆ ಕೂಗಿ ಬಿಜೆಪಿಗೆ ಧಿಕ್ಕಾರ ಕೂಗಿದ್ದರಿಂದ ಗದ್ದಲ- ಕೋಲಾಹಲ ಉಂಟಾಯಿತು.

ಸಭಾಪತಿಗಳು ಎದ್ದು ನಿಂತು ಗದ್ದಲವನ್ನು ನಿಲ್ಲಿಸಿ ಪ್ರತಿಪಕ್ಷದ ನಾಯಕರು ಪತ್ರ ಕೊಟ್ಟಿದ್ದಾರೆ,ಅದರಲ್ಲಿ ಯಾವ ಸದಸ್ಯರನ್ನು ಸಸ್ಪೆಂಡ್ ಮಾಡಬೇಕೆಂದು ನಿರ್ದಿಷ್ಟವಾಗಿ ಹೇಳಿಲ್ಲ,ನೋಟೀಸ್ ಕೊಟ್ಟಿಲ್ಲ ಎಂದು ಹೇಳಿದರು.

ಪತ್ರದ ಸಂಬಂಧ ವಿಷಯ ಪ್ರಸ್ತಾಪಕ್ಕೆ ಅವಕಾಶ ನೀಡಲಾಗುವುದು ಬಳಿಕ ಕ್ರಿಯಾಲೋಪವನ್ನು ಹರಿಪ್ರಸಾದ್ ಎತ್ತಲಿ ಎಂದರು. ಪತ್ರದ ಪ್ರಸ್ತಾಪ ಮಾಡಿದ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು

ಭಾಷಣಕ್ಕೆ ಸೀಮಿತಗೊಳಿಸಿ ಸದನದಿಂದ ಹೊರ ನಡೆದಿದ್ದ ರಾಜ್ಯಪಾಲರನ್ನು ತಡೆದು ಅಗೌರವ ಸೂಚಿಸಿದ್ದ ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಅವರನ್ನು ಸದನದಿಂದ ಸಸ್ಪೆಂಡ್ ಮಾಡಬೇಕೆಂದು ಪ್ರತಿಪಕ್ಷ ಸದಸ್ಯರು ಪಟ್ಟು ಹಿಡಿದರು.

ಭಾಷಣ ಮುಗಿಸಿ ಹೊರ ಹೋಗುತ್ತಿದ್ದ ರಾಜ್ಯಪಾಲರನ್ನ ಗೂಂಡಾಗಳ ರೀತಿ ವರ್ತಿಸಿ ಅವರನ್ನ ತಡೆಯಲು ಪ್ರಯತ್ನಿಸಿದ್ದಾರೆ. ಈ ಮೂಲಕ ಅವರನ್ನು ಗವರ್ನರ್ ಗೆ ಅಗೌರವ ಸೂಚಿಸಿದ್ದಾರೆ. ಹೀಗಾಗಿ ಅವರನ್ನ ಸಸ್ಪೆಂಡ್ ಮಾಡಬೇಕೆಂದು ಒತ್ತಾಯಿಸಿದ್ದಾರೆ. ದುಂಡಾವರ್ತನೆ ತೋರಿದ ಹರಿಪ್ರಸಾದ್ ಅವರ ವಿರುದ್ಧ ಕ್ರಮ ಆಗಬೇಕು ಒಕ್ಕೊರಲಿನಿಂದ ವಿಪಕ್ಷ ಸದಸ್ಯರು ಎದ್ದು ನಿಂತು ಆಗ್ರಹಿಸಿದರು.

ಛಲವಾದಿ ನಾರಾಯಣಸ್ವಾಮಿ ಮಾತಿಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು ಶೇಮ್ .. ಶೇಮ್ ಎಂದು ಘೋಷಣೆ ಕೂಗಿ ತಿರುಗೇಟು ನೀಡಿದರು. ಈ ವೇಳೆ ಕ್ರಿಯಾಲೋಪ ಎತ್ತಿದ ಕಾಂಗ್ರೆಸ್ ಸದಸ್ಯ 2ನೇಪುಟಕ್ಕೆ►

# ದಾಖಲೆ ಮಟ್ಟಕ್ಕೇರಿದ ಚಿನ್ನ- ಬೆಳ್ಳಿ ದರ




**ನವದೆಹಲಿ,ಜ.23**–ಜಾಗತಿಕ ಭೌಗೋಳಿಕ ಮತ್ತು ಆರ್ಥಿಕ ಅನಿಶ್ಚಿತತೆ, ದುರ್ಬಲ ಡಾಲರ್ ಮತ್ತು ಯುಎಸ್ ಫೆಡ್ ರಿಸರ್ವ್ ಬಡ್ಡಿದರ ಕಡಿತಗೊಳಿಸುವ ನಿರೀಕ್ಷೆಗಳಿಂದಾಗಿ ಭಾರತದಲ್ಲಿ ಚಿನ್ನದ ಬೆಲೆ ಮತ್ತೊಮ್ಮೆ ದಾಖಲೆಯ ಗರಿಷ್ಠ ಮಟ್ಟವನ್ನು ತಲುಪಿದೆ. ಇದು ದೇಶಾದ್ಯಂತ ಸಾಮಾನ್ಯ ಜನರ ಆತಂಕವನ್ನು ಹೆಚ್ಚಿಸಿದೆ.

ಇಂದು ಚಿನ್ನ ಮತ್ತು ಬೆಳ್ಳಿ ಬೆಲೆಗಳು ಮತ್ತೆ ಏರಿಕೆಯಾಗುತ್ತಿವೆ.ಸರಕು ಮಾರುಕಟ್ಟೆ ತೆರೆದ ತಕ್ಷಣ ಬೆಳ್ಳಿ ಬೆಲೆಗಳು ಪ್ರತಿ ಕಿಲೋಗ್ರಾಂಗೆ 10,000 ರಷ್ಟು ಏರಿಕೆಯಾಗಿವೆ.

ಚಿನ್ನದ ಬೆಲೆಗಳು ಸಹ 10 ಗ್ರಾಂಗೆ 2,000 ಕ್ಕಿಂತ ಹೆಚ್ಚು ಏರಿಕೆಯಾಗಿವೆ.

ಮಾಹಿತಿಯ ಪ್ರಕಾರ, ರಾಜಧಾನಿ ದೆಹಲಿಯ ಬುಲಿಯನ್ ಮಾರುಕಟ್ಟೆಯಲ್ಲಿ ನಿನ್ನೆಯ ಕುಸಿತದ ನಂತರ, 24 ಕ್ಯಾರೆಟ್ ಚಿನ್ನದ ಬೆಲೆ ಇಂದು 10 ಗ್ರಾಂಗೆ 5,400 ರೂ.ಗಳಷ್ಟು ಹೆಚ್ಚಾಗಿ 1,59,860 ರೂ.ಗಳಿಗೆ ತಲುಪಿದೆ. 22 ಕ್ಯಾರೆಟ್ ಬೆಲೆ 10 ಗ್ರಾಂಗೆ 1,46,550 .ಎಂಸಿಎಕ್ಸ್‌ನಲ್ಲಿ ಚಿನ್ನದ ಬೆಲೆ 2,079 ರೂ.ಗಳಷ್ಟು ಏರಿಕೆಯಾಗಿ 10 ಗ್ರಾಂಗೆ 1,58,889 ರೂ.ಗಳಷ್ಟು ಏರಿಕೆಯಾಗಿ ಆರಂಭವಾಯಿತು. ಎಂಸಿಎಕ್ಸ್‌ನಲ್ಲಿ ಇಂದು ಬೆಳ್ಳಿ ಬೆಲೆ ಕೆಜಿಗೆ 3,39,927 ರೂ.ಗಳಷ್ಟು ಹೊಸ ದಾಖಲೆಯ ಗರಿಷ್ಠ ಮಟ್ಟವನ್ನು ತಲುಪಿದೆ.ಜಾಗತಿಕ ಮಾರುಕಟ್ಟೆಯಲ್ಲಿ ಸ್ಪಾಟ್ ಚಿನ್ನದ ಬೆಲೆ 0.5% 20 $4,961.57 ತಲುಪಿದ್ದರೆ, ಸ್ಪಾಟ್ ಬೆಳ್ಳಿ ಬೆಲೆ 0.9% ಏರಿಕೆಯಾಗಿ ಔನ್ಸ್‌ಗೆ $97.01 ಕ್ಕೆ ತಲುಪಿದೆ.

ನಿನ್ನೆ ಬೆಳಿಗ್ಗೆ ಕೇವಲ 5,000 ರೂ.ಗಳಷ್ಟು ಕುಸಿದಿದ್ದ ಬೆಳ್ಳಿ ಇಂದು ಪ್ರತಿ ಕೆಜಿಗೆ 15,000 ರೂ.ಗಳಷ್ಟು ಹೆಚ್ಚಾಗಿದೆ. ದೆಹಲಿಯ ಬುಲಿಯನ್ ಮಾರುಕಟ್ಟೆಯಲ್ಲಿ ಇಂದಿನ ಬೆಲೆ ಪ್ರತಿ ಕೆಜಿಗೆ 3,40,000 ರೂ.ಗಳಷ್ಟಿದೆ. ಮುಂಬೈ ಮತ್ತು ಪುಣೆ ನಗರಗಳಲ್ಲಿ ಬೆಳ್ಳಿಯ ಬೆಲೆ ದೆಹಲಿಯಂತೆಯೇ ಇದೆ.

ದೇಶಾದ್ಯಂತ ಚಿನ್ನ ಮತ್ತು ಬೆಳ್ಳಿ ಬೆಲೆ ಏರಿಕೆಯಾಗುತ್ತಿದ್ದರೆ, ನಿನ್ನೆ 5,000 ರಷ್ಟು ಸ್ವಲ್ಪ ಕುಸಿತ ಕಂಡಿದ್ದ ಬೆಳ್ಳಿಯ ಬೆಲೆ ಮತ್ತೆ ಏರಿಕೆಯಾಗಿದ್ದು, ಪ್ರತಿ ಕೆಜಿಗೆ 3,40,000 ಕ್ಕೆ ತಲುಪಿದೆ.

# ರಾಯಚೂರು ಜಿಲ್ಲೆಯನ್ನು ಆನೆಕಾಲು ರೋಗಮುಕ್ತ ಮಾಡಲು ರಾತ್ರಿ ವೇಳೆಯ ರಕ್ತಲೇಪನ ಕಾರ್ಯಕ್ಕೆ ತಪ್ಪದೆ ಕೈಜೋಡಿಸಿ: ಡಾ. ಸುರೇಂದ್ರಬಾಬು

ಧೈರ್ಯದ ದಾರಿ

**ರಾಯಚೂರು ಜ,23**– ಜಿಲ್ಲೆಯಲ್ಲಿ ಆನೆಕಾಲು ರೋಗದ ಹೊಸ ಪ್ರಕರಣಗಳ ಸಂಪೂರ್ಣ ನಿಯಂತ್ರಣಕ್ಕಾಗಿ ರೋಗ ಪತ್ತೆ ಹಚ್ಚಲು, ಆಯ್ದ ಗ್ರಾಮಗಳು, ವಲಸೆ ಪ್ರದೇಶಗಳಲ್ಲಿ ರೋಗ ಪತ್ತೆಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಕೀಯ ತಂಡ ರಾತ್ರಿ ವೇಳೆ ಕೈಗೊಳ್ಳುವ ರಕ್ತ ಲೇಪನ ಕಾರ್ಯಕ್ಕೆ ಸಹಕರಿಸಿ ಆನೆಕಾಲು ಮುಕ್ತ ರಾಯಚೂರು ಜಿಲ್ಲೆಯಾಗಿಸಲು ಸಾರ್ವಜನಿಕರಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ವಿನಂತಿಸಿದರು.

ದೇವದುರ್ಗ ತಾಲೂಕಿನ ಗಬ್ಬೂರು ಪ್ರಾಥಮಿಕ ಅರೋಗ್ಯ ಕೇಂದ್ರ ವ್ಯಾಪ್ತಿಯ ಖಾನಾಪೂರು ಗ್ರಾಮದಲ್ಲಿ ರಾತ್ರಿ ವೇಳೆ ಹಮ್ಮಿಕೊಂಡ ರಕ್ತಲೇಪನ ಕಾರ್ಯವನ್ನು ಖುದ್ದು ಪರಿಶೀಲಿಸಿ ಜನತೆಯೊಂದಿಗೆ ಮಾತನಾಡಿ

ಸಮುದಾಯದಲ್ಲಿ ನಮ್ಮೊಂದಿಗೆ ಹಲವು ವಿಧದ ಸೊಳ್ಳೆಗಳು ಇದ್ದು ಅದರಲ್ಲಿ ಕ್ಯೂಲೆಕ್ಸ್ ಸೊಳ್ಳೆಯು, ಆನೆಕಾಲು ರೋಗ ಹೊಂದಿದ ವ್ಯಕ್ತಿಗೆ ಕಚ್ಚಿ ಅದೆ ಸೊಳ್ಳೆ ಇನ್ನೊಬ್ಬರಿಗೆ ಕಚ್ಚಿದಾಗ ಬರಿಗಣ್ಣಿಗೆ ಕಾಣದ 'ವುಚೆರೇರಿಯಾ ಬ್ಯಾಂಕ್ರೋಫ್ಟಿ' 'ಬ್ರೂಗಿಯಾ ಮಲಾಯಿ' ಎಂಬ ಪರಾವಲಂಬಿ ನೂಲಿನಂತಹ ಹುಳುಗಳನ್ನು ಅವರ ದೇಹಕ್ಕೆ ವರ್ಗಾಯಿಸುತ್ತವೆ.

ಈ ಹುಳುಗಳು ರಕ್ತ ಮತ್ತು ದುಗ್ಧರಸನಾಳಗಳಲ್ಲಿ ಬೆಳೆದು, ದ್ರವ ಹರಿಯದಂತೆ ತಡೆಯುತ್ತವೆ, ಇದರಿಂದ ಕೈ ಕಾಲುಗಳು ಆನೆಯ ಕಾಲಿನಂತೆ ದಪ್ಪವಾಗುವ ಮೂಲಕ ಶಾಶ್ವತವಾಗಿ ಆನೆಕಾಲು ರೋಗಕ್ಕೆ ಕಾರಣವಾಗುತ್ತಿದ್ದು, ಜೊತೆಗೆ ಒಮ್ಮೆ ಬಂದರೆ ಜೀವನ ಪರ್ಯಂತ ಕಾಡುವ ಆನೆಕಾಲು ರೋಗಿಯಾಗುವುದನ್ನು ಗುರ್ತಿಸಿ ಆರಂಭದಲ್ಲಿಯೇ ತಡೆಗಟ್ಟಲು ರಾತ್ರಿ ವೇಳೆ ಆರೋಗ್ಯ ಇಲಾಖೆಯ ಜಿಲ್ಲೆಯಲ್ಲಿ ಈಗಾಗಲೆ ಎಲ್ಲ ತಾಲುಕುಗಳ ಆಯ್ದು ಗ್ರಾಮಗಳಲ್ಲಿ, ನಗರದ ವಾರ್ಡ್ಗಳಲ್ಲಿ ರಾತ್ರಿ ವೇಳೆ ರಕ್ತ ಲೇಪನ ಕಾರ್ಯ ಕೈಗೊಳ್ಳಲಾಗುತ್ತಿದ್ದು ಜನತೆಯು ಸಹಕರಿಸಿ ಎಂದು ವಿನಂತಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ ಗಣೇಶ ಕೆ ಮಾತನಾಡಿ, ಸಾಮಾನ್ಯವಾಗಿ ಆನೆಕಾಲು ರೋಗ ವ್ಯಕ್ತಿಯಲ್ಲಿ ಕಂಡುಬರಲು ಧಿರ್ಘಾವಧಿ ತೆಗೆದುಕೊಳ್ಳುತ್ತದೆ. ಆರಂಭದಲ್ಲಿ ಜ್ವರ ಮತ್ತು ಚಳಿ, ಚರ್ಮದ ಮೇಲೆ ಸೋಂಕು ಹಾಗೂ ಕಾಲುಗಳು, ತೋಳುಗಳು, ಸ್ತನಗಳು ಅಥವಾ ಜನನಾಂಗದ ಭಾಗಗಳಲ್ಲಿ ಊತ ಕಂಡುಬರುತ್ತದೆ. ಕ್ರಮೇಣ ಚರ್ಮವು ದಪ್ಪವಾಗಿ, ಗಟ್ಟಿಯಾಗಿ, ಗರುಸಾಗಿ ಆನೆ ಚರ್ಮದಂತೆ ಕಾಣಿಸುವುದು. ಇದರಿಂದ ಅತಿಯಾದ ನೋವು ಮತ್ತು ನಡೆಯಲು ಕಷ್ಟವಾಗುವುದು. ಇದನ್ನು ರೋಗ ಲಕ್ಷಣಗಳನುಸಾರ ನಿರ್ವಹಣೆ ಚಿಕಿತ್ಸೆ ಮಾತ್ರ ಸಾಧ್ಯವಿದ್ದು, ಸಂಪೂರ್ಣ ಗುಣಪಡಿಸಲು ಕಷ್ಟಕರ. ಈ ಹಿನ್ನಲೆ ಮನೆಯ ಸುತ್ತಲು ಚರಂಡಿ, ತಿಪ್ಪೆಗಳ ಹತ್ತಿರ ಅನುಪಯುಕ್ತ ನೀರು ನಿಲ್ಲದಂತೆ ಹಾಗೂ ಮನೆ ಹೊಲ, ಗದ್ದೆಗಳಲ್ಲಿ ಕೆಲಸ ಮಾಡುವಾಗ ಸೊಳ್ಳೆಯಿಂದ ಕಚ್ಚಿಸಿಕೊಳ್ಳದಂತೆ ಜಾಗೃತಿ ವಹಿಸಲು ವಿನಂತಿಸಿದರು.



ಈ ಸಂದರ್ಭದಲ್ಲಿ 105 ಜನರ ಮೇಲೆ ರಕ್ತ ಲೇಪನವನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ ಸಿದ್ರಾಮೇಶ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಹನುಮಂತರಾಯ ಹೂಗಾರ್, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಈರಾಕ್ಷಣಿ, ಸಿಹೆಚ್‌ಓ ಹರೀಶ್, ಆಶಾ ಕಾರ್ಯಕರ್ತೆ ಸಾಬವ್ವ ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರ ತಂಡದ ಮೂಲಕ ಕೈಗೊಂಡರು. ಸಾರ್ವಜನಿಕರು ಆಗಮಿಸಿ ಪರೀಕ್ಷೆಗೆ ಸಹಕರಿಸಿದರು.

# ರಾಯಚೂರು ಉತ್ಸವ-2026ರ ವಿಶೇಷ ವೆಬ್‌ಸೈಟ್ ಲೋಕಾರ್ಪಣೆ




ಧೈರ್ಯದ ದಾರಿ

**ರಾಯಚೂರು,ಜ.23**– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಫೆ.5 ರಿಂದ ಫೆ.7ರವರೆಗೆ ರಾಯಚೂರು ಜಿಲ್ಲೆಯಲ್ಲಿ ನಿಗದಿಯಾದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಪ್ರಚಾರಾರ್ಥ ಸಿದ್ಧಪಡಿಸಿದ ವಿಶೇಷ ವೆಬ್‌ತಾಣವನ್ನು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಜನವರಿ 21ರಂದು ಲೋಕಾರ್ಪಣೆ ಮಾಡಿದರು.

ಉತ್ಸವದ ಪ್ರಚಾರ ಸಮಿತಿಯು ಸಿದ್ಧಪಡಿಸಿರುವ ಈ ವೆಬ್‌ತಾಣದಲ್ಲಿ ಉತ್ಸವದ ಎಲ್ಲ ಕಾರ್ಯಕ್ರಮಗಳ ಸಂಕ್ಷಿಪ್ತ ಮಾಹಿತಿ, ಛಾಯಾಚಿತ್ರಗಳು, ಪೋಸ್ಟರ್, ವಿಶೇಷ ವಿಡಿಯೋಗಳು, ಪ್ರತಿ ದಿನ ನಡೆಯುವ ವಿವಿಧ ಚಟುವಟಿಕೆಗಳ ವಿವರ ಸೇರಿದಂತೆ ಉತ್ಸವ ನಾನಾ ಕಾರ್ಯಕ್ರಮಗಳ ಮಾಹಿತಿಗಾಗಿ www.raichurutsava.com ಲಿಂಕ್ ಬಳಸಿ ವೆಬ್‌ತಾಣಕ್ಕೆ ಭೇಟಿ ನೀಡಬಹುದಾಗಿದೆ. ನಮ್ಮ ಜಿಲ್ಲೆ ಸೇರಿದಂತೆ ರಾಜ್ಯದ ಯಾವುದೇ ಕಡೆಗಳಲ್ಲಿನ ಜನತೆ ಮತ್ತು ವಿಶ್ವದ ಯಾವುದೇ ಭಾಗದಲ್ಲಿನ ಜನತೆ ಈ ವೆಬ್‌ತಾಣಕ್ಕೆ ಭೇಟಿ ನೀಡಿ ಉತ್ಸವದ ಮಾಹಿತಿ ಪಡೆಯಲು ಮತ್ತು ಉತ್ಸವದಲ್ಲಿ ಭಾಗಿಯಾಗಲು ಅನುಕೂಲವಾಗುವಂತೆ ಈ ವೆಬ್‌ಸೈಟ್ ರಚಿಸಲಾಗಿದೆ ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸಚಿವರಿಗೆ ಮಾಹಿತಿ ನೀಡಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಈಶ್ವರ್ ಕಾಂದೂ, ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ತಾಲೂಕುಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ರೈತ ಸಂಘದ ಅಧ್ಯಕ್ಷರಾದ ಚಾಮರಸ ಪಾಟೀಲ, ರಾಜ್ಯ ನೀತಿ ಆಯೋಗದ ಸದಸ್ಯರಾದ ಡಾ.ರಝಾಕ್ ಉಸ್ತಾದ್, ಮಹಾನಗರ ಪಾಲಿಕೆಯ ಸಮಿತಿಯ ಕಾರ್ಯದರ್ಶಿ ಹಾಗೂ ಜಿಲ್ಲಾ ನೌಕರರ ಸಂಘದ ಅಧ್ಯಕ್ಷರಾದ ಕೃಷ್ಣ ಶಾವಂತಗೇರಿ, ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷ ರಾಣಿ, ವಾರ್ತಾ ಇಲಾಖೆಯ ಗವಿಸಿದ್ದಪ್ಪ ಹೊಸಮನಿ, ತಹಸೀಲ್ದಾರರಾದ ಸುರೇಶ ವರ್ಮಾ, ಅಮರೇಶ ಬಿರಾದಾರ ಸೇರಿದಂತೆ ಇನ್ನಿತರರು ಇದ್ದರು.

# ತಾಲೂಕು ಆಡಳಿತದಿಂದ ಮತದಾರರ ಪ್ರತಿಜ್ಞಾ ವಿಧಿ ಸ್ವೀಕಾರ




ಧೈರ್ಯದ ದಾರಿ

**ಮಾನ್ವಿ,ಜ.23**– ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ರವರು ಮತದಾರರ ಪ್ರತಿಜ್ಞಾ ವಿಧಿಯನ್ನು ಭೋದಿಸಿ ಮಾತನಾಡಿ ಚುನಾವಣಾ ಆಯೋಗವು ಪ್ರತಿ ವರ್ಷ ಸಾರ್ವಜನಿಕರಿಗೆ ಮತದಾನದ ಮಹಾತ್ವವನ್ನು ತಿಳಿಸಿ ಜಾಗೃತಿಯನ್ನು ಮೂಡಿಸುವ ಉದ್ದೇಶದಿಂದ ಜ.25 ರಂದು ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಆಚರಿಸಲಾಗುತ್ತದೆ ಅದರ ಅಂಗವಾಗಿ ಇಂದು ಬೆಂಗಳೂರಿನ ಮುಖ್ಯ ಚುನಾವಣಾಧಿಕಾರಿಗಳ ಸೂಚನೆಯಂತೆ ತಾಲೂಕಿನ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಲಾಗುವುದು ಎಂದು ತಿಳಿಸಿದರು.

ಮತದಾರರ ಪ್ರತಿಜ್ಞಾ ವಿಧಿಯಲ್ಲಿ ಗ್ರೇಡ್-2 ತಹಸೀಲ್ದಾರ್ ಅಬ್ದುಲ್ ವಾಹಿದ್, ಕಂದಾಯ ಇಲಾಖೆಯ ಗ್ರಾಮಲೇಕ್ಕಾಧಿಕಾರಿಗಳು, ಕಂದಯ ನಿರೀಕ್ಷಕರು,ಶೀರಸ್ಥೆದಾರರು ಭಾಗವಹಿಸಿದರು.




ಮೊದಲನೇ ಪುಟದಿಂದ

# ಪರಿಷತ್‌ನಲ್ಲಿ ಗದ್ದಲ, ಕೋಲಾಹಲ

ಬಿ.ಕೆ.ಹರಿಪ್ರಸಾದ್ ಮಾತನಾಡಲು ಆರಂಭಿಸುತ್ತಿದ್ದಂತೆ ವಿಪಕ್ಷ ಸದಸ್ಯರು ಆಕ್ಷೇಪಿಸಿದರು. ಗೂಂಡಾಗಿರಿ ವರ್ತನೆ ತೋರಿದ ಹರಿಪ್ರಸಾದ್ ಅವರನ್ನ ಕೂಡಲೇ ಅಮಾನತು ಮಾಡಬೇಕೆಂದು ಆಗ್ರಹಿಸಿದರು.

ಈ ವೇಳೆ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ ರಾಷ್ಟ್ರ ಗೀತೆ ಗೆ ಅವಮಾನ ಮಾಡಿದ ರಾಜ್ಯಪಾಲರಿಗೆ ಏನು ಶಿಕ್ಷೆ ಕೊಡ್ತೀರಾ ಎಂಬುದನ್ನು ಮೊದಲು ಹೇಳಿ ಎಂದು ಒತ್ತಾಯಿಸಿದರು.ಗದ್ದಲ ನಡುವೆಯೂ ಮಾತನಾಡಿ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ ಈ ಹಿಂದೆ ರಾಜ್ಯಪಾಲರಾಗಿದ್ದ ಹಂಸರಾಜ್ ಭಾರದ್ವಾಜ್ ಅವರು ಹಿಂದೆ ಭಾಷಣ ಮಾಡಿರಲಿಲ್ಲ ನಾನು ಸರ್ಕಾರದ ಗುಲಾಮನಲ್ಲ ಎಂದು ಹೇಳಿ ಹೋಗಿದ್ದರು. ಕಾನೂನು ಪ್ರಕಾರ ಹೋರಾಟ ಮಾಡಲಿ. ಅದು ಬಿಟ್ಟು ಗೂಂಡಾಗಿರಿ ಮಾಡುವುದು ಸರಿನಾ.? ಗೂಂಡಾಗಿರಿ ಮಾಡಿದವರನ್ನ ಸದನದಿಂದ ಅಮಾನತು ಮಾಡಬೇಕು. ರಾಜ್ಯಪಾಲರಿಗೆ ಅಪಮಾನವಾಗಿದೆ ಎಂದು ಕಿಡಿಕಾರಿದರು.

ಈ ವೇಳೆ ಬಿ.ಕೆ.ಹರಿಪ್ರಸಾದ್ ಮಾತನಾಡಿ ರಾಜ್ಯಪಾಲರ ಭಾಷಣದ ಪ್ರಕ್ರಿಯೆ ಬಗ್ಗೆ ನಿಯಮಾವಳಿ ಓದುತ್ತಿದ್ದಂತೆ ಬಿಜೆಪಿ ಸದಸ್ಯರು ಆಕ್ಷೇಪಿಸಿದರು. ಪೋಕ್ಸೋ ಪ್ರಕರಣದ ನಾಯಕರಿಗೆ ಹಾರ ಹಾಕುವ ಪಕ್ಷದವರಿಂದ ಪಾಠ ಕಲಿಬೇಕಾ ಎಂದು ಪ್ರಶ್ನಿಸಿದರು.

ಆಡಳಿತ ವಿಪಕ್ಷಗಳ ನಡುವೆ ಗದ್ದಲ ಕೋಲಾಹಲಕ್ಕೆ ಸೃಷ್ಟಿಯಾಯಿತು. ಹರಿಪ್ರಸಾದ್ ಎತ್ತಿದ್ದ ಪಾಯಿಂಟ್ ಆಫ್ ಆರ್ಡರ್ ಪ್ರಸ್ತಾಪವನ್ನು ಸಭಾಪತಿ ಹೊರಟ್ಟಿ ಅವರು ತಿರಸ್ಕರಿಸಿ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿದರು. ಮತ್ತೆ ಕಲಾಪ ಸಮಾವೇಶಗೊಂಡಾಗಲೂ ಆಡಳಿತ-ಪ್ರತಿ ಪಕ್ಷಗಳ ನಡುವೆ ವಾಕ್ಸಮರ ತಾರಕಕ್ಕೇರಿದ್ದರಿಂದ ಸಭಾಪತಿ ಹೊರಟ್ಟಿಯವರು ಕಲಾಪವನ್ನು ಭೋಜನ ವಿರಾಮಕ್ಕೆ ಮುಂದೂಡಿದರು.




ನಾಡಿನ ನಾಡಿಮಿಡಿತ ದಾಖಲಿಸುವ ಲೇಖನಗಳು: ಕನ್ನಡ ಸಾಹಿತ್ಯವು ವಿಪುಲ ಮತ್ತು ವಿಭಿನ್ನ ಹಿನ್ನೆಲೆಗಳುಳ್ಳ ಸಾಹಿತಿಗಳ ಕೊಡುಗೆಯಿಂದ ಶ್ರೀಮಂತವಾಗಿದೆ. ಇಲ್ಲಿ ದರ್ಬೆ ಹಿಡಿದವರು, ಕತ್ತಿ ಹಿಡಿದವರು, ತಕ್ಕಡಿ ತೂಗಿದವರು, ನೇಗಿಲು ಹಿಡಿದವರು, ಸೌಟು ಹಿಡಿದವರು, ತೇಪೆ ಹಿಡಿದವರು, ಕರಿ ಕೋಟು ಹಾಕಿದವರು, ಖಾಕಿ ಧರಿಸಿದವರು; ಆಳಿದವರು, ಆಳಿಸಿಕೊಂಡವರು, ತುಳಿಸಿಕೊಂಡವರು, ಸೋತವರು, ಗೆದ್ದವರು – ಎಲ್ಲರೂ ಪೆನ್ನನ್ನು ಹಿಡಿದು ಸಾಹಿತ್ಯವನ್ನು ರಚಿಸಿದ್ದಾರೆ. ಇನ್ನು ಸಿರೆಂಜು ಹಿಡಿದವರು ಪೆನ್ನು ಹಿಡಿಯದಿದ್ದರೆ ಬಹುತ್ವದ ಮಾತೆಲ್ಲಿ? ಜನರ ನಾಡಿ ನೋಡುವವರು ನುಡಿಯ ಕಟ್ಟದಿದ್ದರೆ ಅಂತಹ ಸಾಹಿತ್ಯ ಅಪೂರ್ಣವಾಗಿಯೇ ಉಳಿಯುತ್ತದೆ.

ಈ ಸುದೀರ್ಘ ಕೃತಿಯು ಹಲವು ಕಾರಣಕ್ಕೆ ಮಹತ್ವದ್ದಾಗಿದೆ. ಇಲ್ಲಿ ವೈದ್ಯರು ತಮ್ಮ ವೃತ್ತಿಯ ಖಾಸಗಿ ಅನುಭವಗಳನ್ನು ದಾಖಲಿಸಿದ್ದಾರೆ. ತಾವು ಚಿಕಿತ್ಸೆ ನೀಡಿದ ವಿಶೇಷ ರೋಗಿಗಳು, ಆಗ ಎದುರಿಸಿದ ಮಾನವೀಯ ಸನ್ನಿವೇಶಗಳು, ಮಿಂಚಿನಂತೆ ಜರುಗಿದ ಪವಾಡ ಸದೃಶ ಸಂಗತಿಗಳು – ಎಲ್ಲವೂ ಇಲ್ಲಿವೆ. ಯಾವುದೇ ಭಾಷಾ ಪಾಂಡಿತ್ಯದ ಗೊಡವೆಗೆ ಹೋಗದೆ ಸರಳಗನ್ನಡದಲ್ಲಿ ಇವನ್ನು ನಿರೂಪಿಸಿದ್ದಾರೆ. ಕೇವಲ ತಮ್ಮ ಯಶಸ್ಸುಗಳನ್ನು ಮಾತ್ರವಲ್ಲದೆ ತಮ್ಮ ಸೋಲುಗಳು, ಅಸಹಾಯಕತೆ, ತಾವು ಅನುಭವಿಸಿದ ಭಯಗಳು, ವಂಚನೆಗಳು, ತಮಾಷೆಗಳು – ಎಲ್ಲವೂ ಇಲ್ಲಿ ಬಂದಿವೆ. ನಾಡಿನ ಮೂಲೆಮೂಲೆಯಲ್ಲಿ ವೃತ್ತಿ ಮಾಡಿದ ಹಲವು ವಯೋಮಾನದ ವೈದ್ಯರು ಇಲ್ಲಿ ಲೇಖನಗಳನ್ನು ಬರೆದಿರುವುದರಿಂದ ಈ ಕೃತಿ ಒಟ್ಟಾರೆಯಾಗಿ ಕನ್ನಡ ನೆಲದ ಜನರ ಬದುಕಿನ ಕ್ರಮ, ಅವರ ಬವಣೆಗಳು, ಅವರ ವೇದನೆಗಳು, ಅವರ ನಂಬಿಕೆಗಳನ್ನು ಪ್ರತಿಫಲಿಸುತ್ತದೆ. ಜಾತಿ-ಧರ್ಮದ ತಾರತಮ್ಯ, ಬಡತನ-ಸಿರಿತನಗಳ ಅರ್ಭಟ, ಗಂಡು-ಹೆಣ್ಣಿನ ನಡುವಿನ ಒಡಕು – ಎಲ್ಲವನ್ನೂ ಇದು ದಾಖಲಿಸುತ್ತದೆ. ಇದನ್ನು ವೈದ್ಯಕೀಯ ಗ್ರಂಥವಾಗಿ ಓದದೆ, ಕನ್ನಡಿಗರ ಸಮಾಜಶಾಸ್ತ್ರದ ಪಠ್ಯವಾಗಿಯೂ ಓದಬಹುದಾಗಿದೆ. ಇಂತಹ ಲೇಖನಗಳನ್ನು ಬರೆಯುವಾಗ ವೈದ್ಯರು ತಮ್ಮ ವೈದ್ಯಕೀಯ ಅಹಂ ಬದಿಗಿಟ್ಟು, ಜನಸಾಮಾನ್ಯರಲ್ಲಿ ಒಂದಾಗಿ ಮತ್ತೊಬ್ಬ ವ್ಯಕ್ತಿಯ ಬದುಕನ್ನು ಕಾಣುವ ಪರಿಯೇ ಹೃದ್ಯವಾಗಿದೆ.

ಎಷ್ಟೇ ತಜ್ಞ ವೈದ್ಯನಾದರೂ ಅವನು ವಿಧಿಯನ್ನು ಮಣಿಸಲಾರ. ತನ್ನ ಕೈಲಾದ ಮಟ್ಟಿಗೆ ಮನುಷ್ಯರ ಒಳಿತಿಗಾಗಿ ಪ್ರಯತ್ನ ಪಡಬಲ್ಲನೇ ಹೊರತು ಪವಾಡ ಜರುಗಿಸಲಾರ. ಆದ್ದರಿಂದ ಕೆಲವೊಮ್ಮೆ ಎಷ್ಟೇ ಪ್ರಯತ್ನ ಪಟ್ಟರೂ ಜೀವವೊಂದು ಕೈಜಾರಿಹೋಗುವುದನ್ನು ನೋಡಬೇಕಾದ ವೈದ್ಯರ ಸಂಕಟಗಳು ಒಟ್ಟಾರೆ ಮನುಕುಲದ ಅಸಹಾಯಕತೆಯ ಕೂಗಿನಂತೆ ಕೇಳುತ್ತದೆ. ವೈದ್ಯರು ಮತ್ತು ಸಮಾಜದ ಕೊಡು-ಕೊಳ್ಳುವಿಕೆ ದ್ವಿಮುಖ ಚಲನೆಯನ್ನು ಹೊಂದಿರುವಂಥದ್ದು. ನಿಸ್ಸಂಶಯವಾಗಿ ವೈದ್ಯರ ಈ ಅನುಭವ ಲೇಖನಗಳಿಂದ ಜನಸಾಮಾನ್ಯರು ಕಲಿಯುವುದು ಸಾಕಷ್ಟಿದೆ. ಆದರೆ ಅಷ್ಟೇ ಸೂಕ್ಷ್ಮವಾಗಿ ವೈದ್ಯರಿಗೂ ಸಮಾಜದ ಹಲವು ಸಂಗತಿಗಳ ಪರಿಚಯವಾಗಿ ಅವರ ಮನಸ್ಸನ್ನು ವಿಸ್ತರಿಸಬಲ್ಲವಾಗಿವೆ. ಭಾರತದ ವೈದ್ಯರು ಬಿಡುವಿಲ್ಲದಂತೆ ದುಡಿಯುವವರು, ಸ್ವಂತ ಕುಟುಂಬಕ್ಕೂ ಸಮಯ ಕೊಡಲಾಗದೆ ಸಮಾಜದ ಆರೋಗ್ಯಕ್ಕಾಗಿ ಶ್ರಮಿಸುವವರು. ಅಂತಹ ಗಾಢ ವೃತ್ತಿಯ ಮಧ್ಯೆಯೂ ಬಿಡುವು ಮಾಡಿಕೊಂಡು ಈ ಲೇಖನಗಳ ಗುಚ್ಛವನ್ನು ಸಂಗ್ರಹಿಸಿ ಪ್ರಕಟಿಸುತ್ತಿರುವುದಕ್ಕೆ ಅವರೆಲ್ಲರನ್ನೂ ಅಭಿನಂದಿಸುತ್ತೇನೆ

**ವಸುಧೇಂದ್ರ (ಕನ್ನಡ ಕತೆಗಾರ)**

# ರಾಹುಲ್ ವಿರುದ್ಧ ಸಿಡಿದೆದ್ದ ಶಶಿ ತರೂರ್



**ನವದೆಹಲಿ, ಜ.23–** ಲೋಕಸಭೆ ವಿರೋದ ಪಕ್ಷದ ನಾಯಕ ರಾಹುಲ್ ಗಾಂಧಿ ಇತ್ತೀಚೆಗೆ ಕೊಚ್ಚಿಗೆ ಭೇಟಿ ನೀಡಿದ ಸಂದರ್ಭದಲ್ಲಿ ತಮಗೆ ಸೂಕ್ತ ಗೌರವ ಸಿಗದ ಕಾರಣ ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಪಕ್ಷದ ವಿರುದ್ಧ ಅಸಮಾಧಾನಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಳೆದ ಹಲವು ತಿಂಗಳುಗಳಿಂದ ಪಕ್ಷ ಮತ್ತು ನಾಯಕತ್ವದ ವಿರುದ್ಧ ಅತೃಪ್ತಿ ಅಸಮಾಧಾನಗೊಂಡು ಅಂತರ ಕಾಪಾಡಿಕೊಂಡಿರುವ ಶಶಿ ತರೂರ್ , ಬಿಜೆಪಿ ಜೊತೆ ಸಂಪರ್ಕ ಬೆಳಸಿಕೊಂಡಿದ್ದಾರೆ. ಈ ನಡುವೆ ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ನಡುವೆಯೇ ಮಧ್ಯಾಹ್ನ ಕಾಂಗ್ರೆಸ್ ಪಕ್ಷದ ಸಭೆಗೆ ಗೈರು ಹಾಜರಾಗಲು ನಿರ್ಧರಿಸಿದ್ದಾರೆ ಎನ್ನಲಾಗಿದೆ.
ಈ ವರ್ಷದ ಕೊನೆಯಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಸಿದ್ಧತೆಗಳ ಕುರಿತು ಚರ್ಚಿಸಲು ರಾಹುಲ್ ಗಾಂಧಿ ಮತ್ತು ಪಕ್ಷದ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಕಾಂಗ್ರೆಸ್ ಕೇರಳ ಘಟಕದ ಹಿರಿಯ ಸದಸ್ಯರು ಮಧ್ಯಾಹ್ನ 2.30 ಕ್ಕೆ ಸಭೆ ಸೇರಲಿದ್ದು ಈ ಸಭೆಗೆ ಶಶಿ ತರೂರ್ ಗೈರು ಹಾಜರಾಗಲಿದ್ದಾರೆ ಎಂದು ಹೇಳಿದ್ದಾರೆ.

ರಾಜ್ಯ ರಾಜಧಾನಿ ತಿರುವನಂತಪುರಂನಿಂದ ನಾಲ್ಕು ಬಾರಿ ಸಂಸದರಾಗಿರುವ ತರೂರ್ ಗೈರು ಹಾಜರಾಗಲಿರುವುದು ಕುತೂಹಲ ಕೆರಳಿಸಿದೆ.
ಕೇರಳ ಮತ್ತು ಕೇಂದ್ರ ಕಾಂಗ್ರೆಸ್ ನಾಯಕರ ಜೊತೆ ಶಶಿ ತರೂರ್ ಅತೃಪ್ತಿ ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ವಿಧಾನಸಭೆ ಚುನಾವಣೆ ಸಂಬಂಧ ಕರೆದಿರುವ ಸಭೆಗೆ ಗೈರು ಹಾಜರಾಗಲಿದ್ದಾರೆ ಎನ್ನಲಾಗಿದೆ.

ರಾಜತಾಂತ್ರಿಕರಾಗಿರುವ ಶಶಿ ತರೂರ್, ಪ್ರಧಾನಿ ಮತ್ತು ಆಡಳಿತಾರೂಢ ಬಿಜೆಪಿಯನ್ನು ಹೊಗಳಿದಂತೆ ಕಾಣುವ ಕಾಮೆಂಟ್‌ಗಳ ನಂತರ ಕಾಂಗ್ರೆಸ್‌ನ ಕೇಂದ್ರ ನಾಯಕತ್ವದ ಬಗ್ಗೆ ಅಸಮಾಧಾನ ಹೊಂದಿದ್ದಾರೆ ಎನ್ನುವುದಕ್ಕೆ ಮತ್ತಷ್ಟು ಪುಷ್ಟಿ ಸಿಕ್ಕಿದೆ.
ಏಪ್ರಿಲ್ 22 ರ ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಪಾಕಿಸ್ತಾನದ ಮೇಲಿನ ಮಿಲಿಟರಿ ದಾಳಿಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಾಡಿ ಹೊಗಳಿ ಪಕ್ಷದ ನಾಯಕತ್ವದ ಕೆಂಗಣ್ಣಿಗೆ ಗುರಿಯಾಗಿದ್ದರು.

ಶಶಿ ತರೂರ್ ಮತ್ತು ಕಾಂಗ್ರೆಸ್ ನಡುವಿನ ಉದ್ವಿಗ್ನತೆ ಭುಗಿಲೆದ್ದಿದ್ದು, ಭಾರತೀಯ ಜನತಾ ಪಕ್ಷವು ತನ್ನ ಬದ್ಧ ವೈರಿಯನ್ನು ಅಣಕಿಸಲು ಆಗಾಗ್ಗೆ ಇದರ ಮೇಲೆ ದಾಳಿ ಮಾಡುತ್ತಿದೆ.ಭಾರತೀಯ ಜನತಾ ಪಕ್ಷದ ಮಾಜಿ ಸಂಸದ ಮತ್ತು ಪ್ರಸ್ತುತ ಭಾರತ ಪುರುಷರ ಕ್ರಿಕೆಟ್ ತಂಡದ ತರಬೇತುದಾರ ಗೌತಮ್ ಗಂಭೀರ್ ಅವರೊಂದಿಗೆ ಸೆಲ್ಫಿ ಪೋಸ್ಟ್ ಮಾಡಿದ್ದಾರೆ, "ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಾಡಿಹೊಗಳಿಸಿದ್ದಾರೆ.

**–ರಾಹುಲ್ ಗಾಂಧಿ ಕೊಚ್ಚಿ ಭೇಟಿ ವೇಳೆ ಅವಮಾನ**
**–ಶಶಿ ತರೂರ್ ಕಾಂಗ್ರೆಸ್ ನಿಂದ ಅಂತರ**
**–ಮಹತ್ವದ ಸಭೆಗೆ ಗೈರು ಹಾಜರಾಗಲಿರುವ ಶಶಿ ತರೂರ್**
**–ಪ್ರಧಾನಿ ಹಾಡಿ ಹೊಗಳಿದ ಶಶಿ ತರೂರ್**
**–ಕೇರಳ ವಿಧಾನಸಭೆ ಚುನಾವಣೆ**
**–ಮಹತ್ವದ ಸಭೆಗೆ ಗೈರು ಹಾಜರಿ ಕುತೂಹಲ ಕ್ಕೆ ಎಡೆ**

# ಕಾಂತಾರ-1ಸೇರಿ ಐದು ಚಿತ್ರಗಳು ಆಸ್ಕರ್ ರೇಸ್ ನಿಂದ ಹೊರಕ್ಕೆ







**ಲಾಸ್ ಏಂಜಲೀಸ್,ಜ.23–**ಸಿನಿ ಲೋಕದ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಯಾದ ಆಸ್ಕರ್ ಪ್ರಶಸ್ತಿಗೆ 5 ಭಾರತೀಯ ಚಿತ್ರಗಳು ಸ್ಥಾನ ಪಡೆದಿದ್ದವು. 'ಹೋಮ್‌ಬೌಂಡ್', 'ತನ್ವಿ: ದಿ ಗ್ರೇಟ್', 'ದಶಾವತಾರ', 'ಕಾಂತಾರ: ಅಧ್ಯಾಯ 1' ಮತ್ತು 'ಮಹಾವತಾರ ನರಸಿಂಹ' ನಾಮನಿರ್ದೇಶನ ಗೊಂಡಿದ್ದು ಈಗ ಅಂತಿಮ ನಾಮನಿರ್ದೇಶನಗಳನ್ನು ಘೋಷಿಸಲಾಗಿದ್ದು, ಕನ್ನಡ ಚಿತ್ರಗಳಿಗೆ ಇದು ಅತ್ಯಂತ ನಿರಾಶೆಯಾಗಿದೆ. ಸ್ಪರ್ಧೆಯಿಂದ 5 ಚಿತ್ರಗಳು ಹೊರ ಬಿದ್ದಿವೆ.

ಹೊಂಬಾಳೆ ಫಿಲ್ಮ್ಸ್ ನಿರ್ಮಿಸಿದ ಬ್ಲಾಕ್‌ಬಸ್ಟರ್ ಚಿತ್ರಗಳಾದ 'ಕಾಂತಾರ ಅಧ್ಯಾಯ 1' ಮತ್ತು 'ಮಹಾವತಾರ ನರಸಿಂಹ' ಅಂತಿಮ ನಾಮನಿರ್ದೇಶನಗಳಿಗೆ ಬರಲು ಸಾಧ್ಯವಾಗಲಿಲ್ಲ.

'ಕಾಂತಾರ ಅಧ್ಯಾಯ 1': ಕನ್ನಡ ಚಲನಚಿತ್ರೋದ್ಯಮವನ್ನು ಮಾತ್ರವಲ್ಲದೆ ಇಡೀ ಭಾರತೀಯ ಚಲನಚಿತ್ರೋದ್ಯಮವನ್ನೇ ತಿರುಗಿಸಿದ 'ಕಾಂತಾರ: ಅಧ್ಯಾಯ 1' ಚಿತ್ರವು ಅತ್ಯುತ್ತಮ ಚಿತ್ರ ಸ್ಪರ್ಧೆಗೆ ಪ್ರವೇಶಿಸಿತ್ತು. ಡಿವೈನ್ ಸ್ಟಾರ್ ಖ್ಯಾತಿಯ ರಿಷಭ್ ಶೆಟ್ಟಿ ಬರೆದು, ನಟಿಸಿ, ನಿರ್ದೇಶಿಸಿದ ಈ ಚಿತ್ರವು 2025 ರ ಎರಡನೇ ಬ್ಲಾಕ್‌ಬಸ್ಟರ್ ಚಿತ್ರವಾಗಿ ಹೊರಹೊಮ್ಮಿದೆ. ಪ್ರಸಿದ್ಧ ಚಲನಚಿತ್ರ ನಿರ್ಮಾಣ ಕಂಪನಿ ಹೊಂಬಾಳೆ ಫಿಲ್ಮ್ಸ್ ನಿರ್ಮಿಸಿದ ಈ ವಿಶೇಷ ಚಿತ್ರವು ವಿಶ್ವಾದ್ಯಂತ ಅಂದಾಜು 850 ಕೋಟಿ ರೂ. ಗಳಿಸಿದೆ.

ಚಿತ್ರ ಪ್ರೇಮಿಗಳಿಂದ ಮಾತ್ರವಲ್ಲದೆ ಭಾರತೀಯ ಚಲನಚಿತ್ರೋದ್ಯಮದ ಗಣ್ಯರಿಂದಲೂ ತನ್ನ ಕಥೆ, ನಿರೂಪಣೆ, ನಟನೆ ಮತ್ತು ನಿರ್ಮಾಣಕ್ಕಾಗಿ ಪ್ರಶಂಸಿಸಲ್ಪಟ್ಟ ಈ ಚಿತ್ರವು ನಿರೀಕ್ಷೆಯಂತೆ ಯಶಸ್ವಿಯಾಗಿದೆ. ಭಾರತೀಯ ಕಥೆಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಗುಣಮಟ್ಟದ ರೀತಿಯಲ್ಲಿ ಕೊಂಡೊಯ್ದು ನಿರ್ಮಾಪಕ ವಿಜಯ್ ಕಿರಗಂದೂರು ದೊಡ್ಡ ಗೆಲುವು ಸಾಧಿಸಿದ್ದಾರೆ. ರಿಷಭ್ ಶೆಟ್ಟಿ ಜೊತೆಗೆ, ರುಕ್ಮಿಣಿ ವಸಂತ್, ಗುಲ್ಶನ್ ದೇವಯ್ಯ ಮತ್ತು ಜಯರಾಮ್ ಚಿತ್ರದಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದಾರೆ.

'ಮಹಾತಾರ್ ನರಸಿಂಹ': ಹೊಂಬಾಳೆ ಫಿಲ್ಮ್ಸ್ ನಿರ್ಮಿಸಿದ 'ಮಹಾತಾರ್ ನರಸಿಂಹ' 'ಅತ್ಯುತ್ತಮ ಅನಿಮೇಟೆಡ್ ಚಲನಚಿತ್ರ ವಿಭಾಗದಲ್ಲಿ ಪ್ರಬಲ ಸ್ಪರ್ಧಿಯಾಗಿ ಹೊರಹೊಮ್ಮಿದೆ. ಅತ್ಯುತ್ತಮ ಅನಿಮೇಟೆಡ್ ಚಲನಚಿತ್ರ ವಿಭಾಗದಲ್ಲಿ ಆಯ್ಕೆಯಾದ (ಕೇವಲ ನಾಮನಿರ್ದೇಶನಗೊಂಡ) ಮೊದಲ ಭಾರತೀಯ ಅನಿಮೇಟೆಡ್ ಚಿತ್ರ ಎಂಬ ಹೆಗ್ಗಳಿಕೆಗೂ ಈ ಚಿತ್ರ ಪಾತ್ರವಾಗಿದೆ.

ಹೊಂಬಾಳೆ ಫಿಲ್ಮ್ಸ್ ಸಾಧನೆ: ಆಸ್ಕರ್ ರೇಸ್‌ನಲ್ಲಿರುವ ಈ ಎರಡೂ ಚಿತ್ರಗಳು ಪ್ರಸಿದ್ಧ ಕನ್ನಡ ಚಲನಚಿತ್ರ ನಿರ್ಮಾಣ ಕಂಪನಿ ಹೊಂಬಾಳೆ ಫಿಲ್ಮ್ಸ್‌ನಿಂದ ಬಂದವು. ಬೆಂಗಳೂರಿನ ವಿಜಯ್ ಕಿರಗಂದೂರು ಮತ್ತು ಚಲುವೇಗೌಡ 2012 ರಲ್ಲಿ ಈ ಚಲನಚಿತ್ರ ನಿರ್ಮಾಣ ಕಂಪನಿಯನ್ನು ಸ್ಥಾಪಿಸಿದರು. ಪುನೀತ್ ರಾಜ್‌ಕುಮಾರ್ ನಟಿಸಿದ 'ನಿನಿಂದಲೆ' ಚಿತ್ರದೊಂದಿಗೆ ಚಲನಚಿತ್ರ ನಿರ್ಮಾಣ ಪ್ರಯಾಣ ಪ್ರಾರಂಭವಾಯಿತು ಮತ್ತು ನಂತರ ಮಾಸ್ಟರ್‌ಪೀಸ್, ರಾಜ್‌ಕುಮಾರ್, ಕೆಜಿಎಫ್ ಅಧ್ಯಾಯ 1, ಯುವರತ್ನ, ಕೆಜಿಎಫ್ ಅಧ್ಯಾಯ 2, ಕಾಂತಾರ, ರಾಘವೇಂದ್ರ ಸ್ಟೋರ್ಸ್, ಧೂಮ್, ಸಲಾರ್ ಪಾರ್ಟ್ಸ್ 1, ರಘು ಟಾಟಾ, ಕಾಂತಾರ, ಯುವ, ಬಘೀರಾ, ಕಾಂತಾರ ಅಧ್ಯಾಯ 1 ಮುಂತಾದ ಚಿತ್ರಗಳನ್ನು ನಿರ್ಮಿಸಿದ್ದಾರೆ.

70 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ, 'ಕಾಂತಾರ' 'ಅತ್ಯುತ್ತಮ ಮನರಂಜನಾ ಚಿತ್ರ ಪ್ರಶಸ್ತಿಯನ್ನು ಗೆದ್ದು ರಿಷಭ್ ಶೆಟ್ಟಿ 'ಅತ್ಯುತ್ತಮ ನಟ' ರಾಷ್ಟ್ರೀಯ ಪ್ರಶಸ್ತಿಯನ್ನು ಮತ್ತು ಕೆಜಿಎಫ್ 2 ಅತ್ಯುತ್ತಮ ಸಾಹಸ ನಿರ್ದೇಶನ ಪ್ರಶಸ್ತಿಯನ್ನು ಗೆದ್ದುಕೊಂಡಿದೆ. ರಾಷ್ಟ್ರೀಯ ಪ್ರಶಸ್ತಿಗಳ ನಂತರ, ಅವರು ವಿಶ್ವಪ್ರಸಿದ್ಧ ಆಸ್ಕರ್‌ನಲ್ಲಿ ಭಾಗವಹಿಸಿದರು, ಇದು ಕನ್ನಡದ ಖ್ಯಾತಿಯನ್ನು ಹೆಚ್ಚಿಸಿದೆ.

# ಹೀಗೊಂದು ಪಾಲು.... ಅರಿವಿನ ಬದುಕಿಗೆ ರಹದಾರಿ

ಅದೊಂದು ಕುಟುಂಬ ಆ ಕುಟುಂಬದ ಯಜಮಾನಿ ತಾಯಿ ಮರಣ ಹೊಂದಿದ್ದಾಳೆ. ಆಕೆಯ ಹಿರಿಯ ಮಗ ಅತ್ಯಂತ ಬೆಲೆ ಬಾಳುವ ಕಾರಿನಲ್ಲಿ ದುಬಾರಿ ಬೆಲೆಯ ಬಟ್ಟೆಗಳನ್ನು ಧರಿಸಿ ತಾಯಿಯ ಅಂತ್ಯಕ್ರಿಯೆಗೆ ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಬರುತ್ತಾನೆ. ಕುಟುಂಬದ ಎಲ್ಲ ಜವಾಬ್ದಾರಿಗಳು ತನ್ನ ಮೇಲಿವೆ ಎಂಬ ಗತ್ತಿನ ಭಾವ ಆತನ ನಡೆಯಲ್ಲಿ ಇತ್ತು. ತರಗತಿಯಲ್ಲಿ ಯಾವಾಗಲೂ ಒಳ್ಳೆಯ ಅಂಕಗಳನ್ನು ಗಳಿಸುತ್ತಾ ಉನ್ನತ ವಿದ್ಯಾಭ್ಯಾಸವನ್ನು ಮಾಡಿ ಒಳ್ಳೆಯ ವೇತನ ವಿರುವ ಉದ್ಯೋಗವನ್ನು ಹಿಡಿದ ಹಾಗೂ ತಂದೆ ತಾಯಿಗಳಿಗೆ ನಿಯಮಿತವಾಗಿ ಹಣವನ್ನು ಕಳುಹಿಸುತ್ತಿರುವ ತಾನು ಆ ಮನೆಗೆ ಅತ್ಯಂತ ಮುಖ್ಯವಾದ ವ್ಯಕ್ತಿ ಎಂಬ ಭಾವ ಆತನ ಪ್ರತಿ ಹೆಜ್ಜೆಯಲ್ಲೂ ಕಾಣುತ್ತಿತ್ತು.

ಸುಮಾರು 15 ವರ್ಷಗಳ ಕಾಲ ವಿದೇಶದಲ್ಲಿ ಇದ್ದು ತನ್ನದೇ ಆದ ಸ್ವಂತ ಉದ್ಯೋಗ, ಮನೆ ಹಾಗೂ ಸಾಕಷ್ಟು ಆಸ್ತಿ, ಬ್ಯಾಂಕ್ ಬ್ಯಾಲೆನ್ಸ್ ಹೊಂದಿದ್ದು ತಂದೆ ತಾಯಿಗಳನ್ನು ಜೋಪಾನ ಮಾಡಲು ತನ್ನ ತಮ್ಮನಿಗೆ ಪ್ರತಿ ತಿಂಗಳು ಸಾವಿರಾರು ರೂ ಹಣವನ್ನು ಆತ ಹಾಕುತ್ತಿದ್ದ. ತಾನು ಕಳುಹಿಸುವ ಹಣದಲ್ಲಿಯೇ ತನ್ನ ಸಹೋದರ ತಾಯಿಯನ್ನು ನೋಡಿಕೊಂಡು ಹಳ್ಳಿಯಲ್ಲಿರುವ ಹಳೆಯ ಮನೆಯಲ್ಲಿ ಇದ್ದಾನೆ ನನ್ನಿಂದಲೇ ಆತನ ಕುಟುಂಬದ ಖರ್ಚು ವೆಚ್ಚಗಳು ಸಾಗುತ್ತಿವೆ... ಆದ್ದರಿಂದ ಆತ ತನಗೆ ಋಣಿಯಾಗಿರಬೇಕು ಎಂಬ ಹೆಮ್ಮೆಯ ಭಾವ ಅಣ್ಣನಲ್ಲಿತ್ತು. ತನ್ನ ತಾಯಿಗೆ ತಾನು ಕಳುಹಿಸುವ ಹಣದಿಂದ ಆಕೆ ತನ್ನ ಜೀವನದ ಸಂಜೆಯನ್ನು ಅತ್ಯಂತ ಸಂತೋಷವಾಗಿ ಕಳೆಯುತ್ತಿದ್ದಳು ಎಂಬ ಗರ್ವ ಕೂಡ ಆತನಲ್ಲಿತ್ತು.

ಅಂತ್ಯ ಸಂಸ್ಕಾರದ ವಿಧಿ ವಿಧಾನಗಳು ಮುಗಿದ ನಂತರ ಎಲ್ಲರೂ ಮನೆಗೆ ಹಿಂದಿರುಗಿ ಸ್ನಾನ ಮಾಡಿ ಸೇರಿದಷ್ಟನ್ನು ತಿಂದು ಮನೆಯ ವರಾಂಡದಲ್ಲಿ ಮೌನವಾಗಿ ಕುಳಿತಾಗ ಅಣ್ಣನ ದೃಷ್ಟಿ ಮನೆಯ ಹೊರ ವಲಯದ ಕಡೆ ಚಾಚಿತು.

ಅರೆ! ಮನೆಯ ಕೈದೋಟ ಇಷ್ಟೇಕ್ಕೆ ಒಣಗಿ ಹೋಗಿದೆ.

ಮನೆಯ ಗೋಡೆಗಳ ಬಣ್ಣವೆಲ್ಲ ಹಕ್ಕಳೆ ಉದುರಿ ಹೋಗಿದೆ. ಕುಣಿಯಲ್ಲಿ ಅಮ್ಮನನ್ನು ಕೂರಿಸುವಾಗ ಲಕ್ಷ್ಯ ಕೊಟ್ಟು ನೋಡಿದರೆ ಅಮ್ಮ ಬಹಳ ಬಡವಾಗಿ ಹೋಗಿದ್ದರು...ಹಾಗಾದರೆ ತಾನು ಹೇಳಿದಂತಹ ಪೌಷ್ಟಿಕ ಆಹಾರವನ್ನು ತಮ್ಮ ಕೊಟ್ಟಿಲ್ಲವೇ ಎಂಬ ಅನುಮಾನ ಆತನನ್ನು ಕಾಡಿತ್ತು. ಇದೀಗ ಮನೆಯ ಪರಿಸ್ಥಿತಿ ಆತನಿಗೆ ಈ ಎಲ್ಲಾ ವಿಷಯಗಳ ಕುರಿತು ಯೋಚಿಸುವಂತೆ ಮಾಡಿತು. ಬಹಳ ಸಮಯದ ನಂತರ ತಮ್ಮನನ್ನು ಕುರಿತು ಈ ಕುರಿತು ಆತ ಪ್ರಶ್ನಿಸಿದ.

ತಮ್ಮ ಏನೊಂದು ಉತ್ತರಿಸದೆ ಅಣ್ಣನ ಮುಖವನ್ನು ಸುಮ್ಮನೆ ದಿಟ್ಟಿಸಿ ನೋಡಿದ. ಹಳೆಯ ಟೀ ಶರ್ಟ್ ಹಾಗೂ ಪಂಚೆಯನ್ನು ಉಟ್ಟಿದ್ದ ಆತನ ಕಣ್ಣುಗಳ ಕೆಳಗೆ ಕಪ್ಪು ವರ್ತುಲ ಮಡುಗಟ್ಟಿದ್ದರೆ ದೇಹದಲ್ಲಿ ದಣಿದ ಭಾವ ಕೈಗಳು ಕಪ್ಪಗಿನ ಕಲೆಯಿಂದ ಕೂಡಿದ್ದವು. ತನ್ನ ಅಣ್ಣನಿಗಿಂತ ಕೇವಲ ಮೂರು ವರ್ಷ ಚಿಕ್ಕವನಾದರೂ ಕೂಡ ಆತ ಅಣ್ಣನಿಗಿಂತ 10 ವರ್ಷ ದೊಡ್ಡವನಂತೆ ಕಾಣುತ್ತಾನೆ. ಮುಖದಲ್ಲಿ ಸೋತ, ದಣಿದ ಭಾವ.

ಆತನ ಉತ್ತರಕ್ಕಾಗಿ ನಿರೀಕ್ಷಿಸದ ಅಣ್ಣ ಎಲ್ಲ ಕಾರ್ಯಗಳು ಮುಗಿದ ಮೇಲೆ ಮನೆಯನ್ನು ಮಾರಿಬಿಡೋಣ. ನನಗೆ ಅಷ್ಟೇನೂ ಹಣದ ಅವಶ್ಯಕತೆ ಇಲ್ಲ. ನಾವು ಅದನ್ನು 60-40 ಶೇಕಡ ಹಂಚಿಕೊಳ್ಳೋಣ ಎಂದು ಹೇಳಿದ. ತಮ್ಮನಿಗೆ ಹೆಚ್ಚಿನ ಪಾಲು ನೀಡುವ ಮಾತನಾಡಿದ್ದಕ್ಕೆ ತಮ್ಮನ ಮುಖದಲ್ಲಿ ಕೃತಜ್ಞತೆಯ ಭಾವವನ್ನು ಅಣ್ಣ ನಿರೀಕ್ಷಿಸಿದ್ದ...ಆದರೆ ಕಟುವಾದ ಅರಗಿಸಿಕೊಳ್ಳಲಾಗದ ಸತ್ಯ ಆತನ ಮುಂದೆ ಬರಲಿತ್ತು.

ನಿಧಾನವಾಗಿ ಮೇಲೆದ್ದ ತಮ್ಮ ಅಲ್ಲಿಯೇ ಇದ್ದ ಮಾಡಿನಲ್ಲಿದ್ದ ಹಳೆಯ ಶಾಲೆಯ ನೋಟ್ ಪುಸ್ತಕ ಒಂದನ್ನು ಅಣ್ಣನ ಕೈಗಿತ್ತ. ತುಂಬಾ ಹಳೆಯದಾದ ಮುದುರಿದ ಅಲ್ಲಲ್ಲಿ ಗೀಚಿದ ಆ ಪುಸ್ತಕವನ್ನು ಕೊಟ್ಟ ತಮ್ಮ ಇದನ್ನು ಓದು ಎಂದಷ್ಟೇ ಹೇಳಿದ. ಅದು ದೈನಂದಿನ ಖರ್ಚು ವೆಚ್ಚಗಳ ಕುರಿತಾದ ಪುಸ್ತಕವಾಗಿರದೆ ಅಮ್ಮನ ದಿನಚರಿಯ ಕುರಿತ ಪುಸ್ತಕವಾಗಿತ್ತು.

ಈ ದಿನ ರಾತ್ರಿ ಅಮ್ಮ ಒಂಚೂರು ಮಲಗಲಿಲ್ಲ. ಆಗಾಗ ಕಣ್ಣು ತೆಗೆದು ಅಣ್ಣ ಬಂದನೇ? ಎಂದು ಕೇಳುತ್ತಿದ್ದಳು. ರಾತ್ರಿಯೆಲ್ಲಾ ಹಾಸಿಗೆ ಒದ್ದೆ ಮಾಡಿದ ಅಮ್ಮನ ಹಾಸಿಗೆಯನ್ನು ಸುಮಾರು ಐದು ಬಾರಿ ನಾನು ಬದಲಿಸಿದೆ. ಅಂತಿಮವಾಗಿ ಅಮ್ಮನಿಗೆ ಮುಂಜಾನೆ ಸ್ನಾನ ಮಾಡಿಸುವಾಗ ಆಕೆ ನನ್ನ ಕೈಯನ್ನು ಕಚ್ಚಿದಳು

ಪುಟವನ್ನು ತಿರುಗಿಸಿದಾಗ ಅಮ್ಮನ ಔಷಧಿಗಳಿಗೆ ಹಣ ಸಾಲುತ್ತಿಲ್ಲ ಆದ್ದರಿಂದ ಈ ದಿನ ನಾನು ನನ್ನ ಮೋಟರ್ ಬೈಕ್ ಮಾರಿದೆ ಎಂದು ಬರೆದಿತ್ತು.

ಮತ್ತೊಂದು ಪುಟದ ಕಡೆ ಕಣ್ಣು ಹಾಯಿಸಿದಾಗ ಈ ದಿನ ಅಮ್ಮ ಯಾರನ್ನೂ ಗುರುತಿಸುತ್ತಿಲ್ಲ... ಆಕೆಗೆ ತನ್ನ ಹಿರಿಯ ಮಗನ ಕಡೆ ಚಿತ್ತ. ಆಗಾಗ ಮನೆಯ ಫೋನಿನ ಕಡೆ ನೋಡಿ ನಿಡುಸುಯ್ಯುತ್ತಿದ್ದ ಆಕೆಯನ್ನು ನೋಡಿ ತಡೆಯಲಾಗದೆ ಈ ಹಿಂದೆ ಅಣ್ಣ ಮಾತನಾಡಿದ ಧ್ವನಿ ಮುದ್ರಿಕೆಯನ್ನು ಆಕೆಗೆ ಕೇಳಿಸಿದಾಗ ಮಾತ್ರ ಆಕೆಯನ್ನು ಸಮಾಧಾನ ಪಡಿಸಲು ಸಾಧ್ಯವಾಯಿತು. ಒಂದರೆ ಕ್ಷಣ ಕೂಡ ನನ್ನನ್ನು ಮಂಚದ ಪಕ್ಕದಿಂದ ಸರಿಯಲು ಅಮ್ಮ ಬಿಡಲಿಲ್ಲ.... ಅಮ್ಮನ ಮಂಚದ ಪಕ್ಕದಲ್ಲಿಯೇ ಕುಳಿತು ನನ್ನ ಪತ್ನಿ ನನಗೆ ಕೊಟ್ಟ ಊಟವನ್ನು ಸೇವಿಸಿದೆ ಎಂದು ಬರೆದಿತ್ತು.

ಪುಟವನ್ನು ತಿರುಗಿಸಿದಾಗ ಅಮ್ಮನನ್ನು ಹೊತ್ತು ಬಚ್ಚಲು ಮನೆಗೆ, ಅಂಗಳಕ್ಕೆ, ಹಜಾರಕ್ಕೆ, ಹಿತ್ತಲಿಗೆ ಎಂದು ಓಡಾಡಿ ನನ್ನ ಬೆನ್ನು ಮೂಳೆಯಲ್ಲಿ ಲಘುವಾದ ಬಿರುಕು ಉಂಟಾಗಿದ್ದು ಇನ್ನು ಮೇಲೆ ನಾನು ಅತಿ ಭಾರವನ್ನು ಹೊರಬಾರದು ಎಂದು ವೈದ್ಯರು ಹೇಳಿದ್ದಾರೆ ಆದ್ದರಿಂದ ಈ ವಾರ ನಾನು ಯಾವುದೇ ಭಾರದ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ.

ಹಿರಿಯ ಮಗನ ಗಂಟಲು ಕಟ್ಟಿತು.... ಮುಂದಿನ ಪುಟವನ್ನು ತಿರುಗಿಸಿ ಓದಲು ಆತನಿಗೆ ಸಾಧ್ಯವಾಗಲೇ ಇಲ್ಲ.

ಇದೀಗ ಅಣ್ಣನನ್ನು ನಿಟ್ಟಿಸಿ ನೋಡಿದ ತಮ್ಮ ಅತ್ಯಂತ ಮೆಲುವಾದ ದನಿಯಲ್ಲಿ ನಿರ್ಭಾವುಕನಾಗಿ ಹೇಳಲಾರಂಭಿಸಿದ.

ಅಣ್ಣ ನೀನು ಪ್ರತಿ ತಿಂಗಳು ಹಣವನ್ನೇನೋ ಕಳುಹಿಸುತ್ತಿದ್ದೆ.. ಅದಕ್ಕೆ ನಿನಗೆ ಧನ್ಯವಾದಗಳು... ನೀನು ದಿನಕ್ಕೆ ಕನಿಷ್ಠ 8 ಗಂಟೆಯಾದರೂ ನೆಮ್ಮದಿಯ ನಿದ್ರೆಯನ್ನು ಮಾಡುತ್ತಿದ್ದೆ, ನಿನಗೆ ವಾರಾಂತ್ಯಗಳಲ್ಲಿ ಹೊರ ಸುತ್ತಾಟಕ್ಕೆ ರಜೆಗಳು ಹಾಗೂ ಸವಲತ್ತುಗಳು ಇದ್ದವು.

ಆದರೆ ನಾನು ಕಳೆದ ನಾಲ್ಕು ವರ್ಷಗಳಲ್ಲಿ ಒಂದೇ ಒಂದು ರಾತ್ರಿಯೂ ಸರಿಯಾಗಿ ನಿದ್ದೆ ಮಾಡಲು ಸಾಧ್ಯವಾಗಿಲ್ಲ. ನನ್ನ ಪತ್ನಿ ಮತ್ತು ಮಕ್ಕಳು ಕೂಡ ನನಗೆ ಸಹಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ನಿಜ! ಆದರೆ ಅಮ್ಮನನ್ನು ಜೋಪಾನ ಮಾಡಲು ನಾನು ನನ್ನ ಉದ್ಯೋಗವನ್ನು ತ್ಯಜಿಸಲೇಬೇಕಾಗಿತ್ತು.

ಒಂದೆರಡು ಕ್ಷಣ ಸುಮ್ಮನಿದ್ದು ಮತ್ತೆ ಮುಂದುವರೆಸಿದ ತಮ್ಮ ನೀನು ಕಳುಹಿಸಿದ ಹಣದಿಂದ ಅಮ್ಮನಿಗೆ ಕೇವಲ ಡೈಪರ್ಗಳನ್ನು ಕೊಳ್ಳಲು ಸಾಧ್ಯವಾಯಿತು, ನಿಜ ಆದರೆ ಆ ಡೈಪರ್ ಗಳನ್ನು ಹಾಕಲು ತೆಗೆಯಲು ಸ್ವಚ್ಛಗೊಳಿಸಲು ಆ ಹಣದಿಂದ ಸಾಧ್ಯವಿಲ್ಲ. ನೀನು ಕಳುಹಿಸಿದ ಹಣದಿಂದ ಅಮ್ಮನ ಔಷಧಿಗಳನ್ನು ಕೊಳ್ಳಲು ಸಾಧ್ಯವಾಯಿತು ನಿಜ ಆದರೆ ಎಲ್ಲಾ ಅನಾರೋಗ್ಯಗಳು ಕೇವಲ ಔಷಧಿಯಿಂದ ಗುಣವಾಗುವುದಿಲ್ಲ... ವಯಸ್ಸಾದ ವ್ಯಕ್ತಿಗಳಿಗೆ ಔಷಧಿಗಿಂತ ಹೆಚ್ಚಾಗಿ ಭಾವನಾತ್ಮಕ ಅವಶ್ಯಕತೆಯೂ ಇರುತ್ತದೆ.

ವಯೋ ಸಹಜ ತೊಂದರೆಗಳಿಂದ ಹೆದರಿ ನಡುಗುತ್ತಿರುವ ಅನುಭವಿಸುತ್ತಿರುವ ತಾಯಿಗೆ ಹಣದ ಅವಶ್ಯಕತೆಗಿಂತ ಹೆಚ್ಚಾಗಿ ಆ ಕ್ಷಣದಲ್ಲಿ ಸಾಂತ್ವನದ ಅವಶ್ಯಕತೆ ಇರುತ್ತದೆ. ಹಣದಿಂದ ಡೈಪರ್ ಗಳನ್ನು, ಔಷಧಿಗಳನ್ನು ಕೊಳ್ಳಬಹುದೇ ಹೊರತು ಭದ್ರತೆಯ ಭಾವವನ್ನೆಲ್ಲ ಎಂದು ಹೇಳಿ ನಿಡಿದಾದ ಉಸಿರನ್ನು ಬಿಟ್ಟ ತಮ್ಮ ಮತ್ತೆ ಒಂದು ಹೆಜ್ಜೆ ಮುಂದೆ ನಡೆದು ಬಂದು ಅಣ್ಣ ಇಡೀ ಮನೆಯನ್ನು ಮಾರು ಎಲ್ಲಾ ಹಣವನ್ನು ನೀನೆ ತೆಗೆದುಕೋ ಏಕೆಂದರೆ ಈಗಾಗಲೇ ನಾನು ನನ್ನ ಪಾಲಿನ ಎಲ್ಲ ಶ್ರಮವನ್ನು ದುಡಿಮೆಯನ್ನು ಹಾಕಿದ್ದೇನೆ.... ಇನ್ನು ದುಡಿಯುವ ಅನಿವಾರ್ಯತೆ ಹಾಗೂ ಚೈತನ್ಯ ಎರಡು ನನಗೆ ಇದೆ... ಪ್ರಸ್ತುತ ನನಗೆ ಬೇಕಾಗಿರುವುದು ಒಂದು ನೆಮ್ಮದಿಯ ನಿದ್ರೆ ಮತ್ತು ವಿಶ್ರಾಂತಿ ಎಂದು ಹೇಳಿ ಅಮ್ಮನ ಕೋಣೆಗೆ ಹೋಗಿ ಮಲಗಿದನು. ಹಲವಾರು ವರ್ಷಗಳಿಂದ ಬೇಕು ಬೇಕೆಂದು ಆತ ಕಾತರಿಸುತ್ತಿದ್ದರೂ ತಾಯಿಯ ಪಾಲನೆಯ ಜವಾಬ್ದಾರಿಯಿಂದ ಓಡಿ ಹೋಗುತ್ತಿದ್ದ ನಿದ್ರಾ ದೇವಿ ಕೆಲವೇ ಕ್ಷಣಗಳಲ್ಲಿ ಆತನನ್ನು ಇನ್ನಿಲ್ಲದಂತೆ ಆವರಿಸಿದಳು.

ಅದುವರೆಗೂ ಅತಿ ದೊಡ್ಡ ಭ್ರಮೆಯನ್ನು ಹೊತ್ತು ಕುಳಿತಿದ್ದ ಅಣ್ಣ ಅಲ್ಲಿಯೇ ಇದ್ದ ಹಳೆಯ ಮುರುಕು ಸೋಫಾದ ಮೇಲೆ ತನ್ನೆಲ್ಲ ಮನೋ ದೈಹಿಕ ಭಾರವನ್ನು ಹಾಕಿ ಧೂಪ್ಪೆಂದು ಕುಳಿತ. ಕೈಯಲ್ಲಿದ್ದ ದುಬಾರಿ ಬೆಲೆಯ ವಾಚಿನ ಮಿಡಿಯುವ ಟಿಕ್ ಟಿಕ್ ಎಂಬ ಶಬ್ದ ಆತನಿಗೆ ಕಿರಿಕಿರಿಯನ್ನು ಹುಟ್ಟಿಸಿದರೆ ಮನೆಯ ಮುಂಭಾಗದಲ್ಲಿ ಆತ ಬಿಚ್ಚಿಟ್ಟಿದ್ದ ಬ್ರಾಂಡೆಡ್ ಶೂಗಳು ಆತನನ್ನು ಇನ್ನಿಲ್ಲದಂತೆ ಅಣಕಿಸಿದಂತೆ ಭಾಸವಾಯಿತು.

ಇಲ್ಲಿಯವರೆಗೂ ತಾನು ಮಾಡಿದ ಸಾಧನೆಗಳೆಲ್ಲವೂ ಕ್ಷಣಮಾತ್ರದಲ್ಲಿ ನೆಲಕ್ಕಪ್ಪಳಿಸಿದಂತಾಯಿತು ಆತನಿಗೆ. ಇಡೀ ಕುಟುಂಬದ ಸಂರಕ್ಷಕ ನಾನು ಎಂಬ ಭ್ರಮೆಯ ಮುಖವಾಡ ಕಳಚಿ ಬಿದ್ದಂತಾಯಿತು

ನಿಜವಾಗಿಯೂ ಕುಟುಂಬವನ್ನು ಸಂರಕ್ಷಿಸಿದಾತ ತನ್ನ ತಮ್ಮ. ನಾನು ಔಷಧಿಗಾಗಿ ಹಣ ಕಳುಹಿಸಿದೆ ನಿಜ ಆದರೆ ಆತ ತಾಯಿಗೆ ಔಷಧಿ, ಮಾತ್ರೆ ತಿನ್ನಿಸಿ, ಹೊತ್ತು ಹೊತ್ತಿಗೆ ಊಟ ಮಾಡಿಸಿ ಆಕೆಯ ಆರೋಗ್ಯವನ್ನು ಕಾಯ್ದ.


ತಾಯಿಯ ಅಂತಿಮ ಕ್ರಿಯೆಗಳಿಗೆ ತಾನು ಹಣ ಖರ್ಚು ಮಾಡಿರಬಹುದು ಆದರೆ ತಾಯಿಯ ಅಂತಿಮ ದಿನಗಳವರೆಗೆ ಆಕೆಯನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿದ ತಮ್ಮ ಆಕೆಯ ಪಾಲಿಗೆ ನಿಜವಾದ ಪೋಷಕನಾದ.

ಆ ದಿನ ಮಧ್ಯಾಹ್ನ ಅಣ್ಣ ಸೀದಾ ನೋಟರಿಯ ಬಳಿ ಹೋಗಿ ಇಡೀ ಮನೆಯನ್ನು ತಮ್ಮನ ಹೆಸರಿಗೆ ವರ್ಗಾಯಿಸಿದ.... ತಮ್ಮನಿಗೆ ಮನೆಯ ತನ್ನ ಭಾಗದ ಆಸ್ತಿಯನ್ನುಹಾಗೆ ಕೊಟ್ಟದ್ದು ಕೊಡುಗೆಯಾಗಿ ಅಲ್ಲ ಬದಲಾಗಿ ಮರುಪಾವತಿಸಲೇಬೇಕಾದ ಋಣವನ್ನು ಸಂದಾಯ ಮಾಡುವ ನಿಟ್ಟಿನಲ್ಲಿ.

ಅದಾಗಿಯೂ ತಮ್ಮನ ಜಾಗವನ್ನು ತಾನು ತುಂಬಲು ಸಾಧ್ಯವಿಲ್ಲ ಎಂಬುದರ ಅರಿವು ಆತನಿಗೆ ಈಗ ಬಹಳ ತಡವಾಗಿಯಾದರೂ ಸರಿಯಾಗಿ ಅರ್ಥವಾಗಿತ್ತು.

ಸ್ನೇಹಿತರೆ....ದೂರ ಅಂತರಿಕ್ಷದಲ್ಲಿರುವ ನಮಗೆ ಕಾಲ ಕಾಲಕ್ಕೆ ಸಂದೇಶವನ್ನು ಕಳುಹಿಸುವ ಉಪಗ್ರಹ ಹಾಗೂ ನಮ್ಮ ಜೊತೆಗೆ ಇರುವ ಊರುಗೋಲು ಇವುಗಳಲ್ಲಿ ವೃದ್ಧರ ಮೊದಲ ಆಯ್ಕೆ ಯಾವುದು ಎಂದು ನೀವು ಕೇಳಿದರೆ ಅವರು ಊರುಗೋಲನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ.

ಕುಟುಂಬದ ಅತ್ಯಂತ ಜಾಣ ಮಗ ದೂರದಲ್ಲಿರುವ ಉಪಗ್ರಹದಂತೆ. ಆಗಾಗ ಸಂದೇಶಗಳನ್ನು ಕಳುಹಿಸುವ ಉಪಗ್ರಹದಂತೆ ಮಗನು ಕೂಡ ಆಗಾಗ ಹಣವನ್ನು ಕಳುಹಿಸಿ ತನ್ನ ಕರ್ತವ್ಯವನ್ನು ನಿಭಾಯಿಸಬಹುದು ಆದರೆ ವಯೋ ಸಹಜವಾಗಿ ಆಸರೆಯನ್ನು ಬಯಸುವ ಜೀವಿಗಳಿಗೆ ಅತ್ಯವಶ್ಯಕವಾಗಿ ಬೇಕಾಗುವ ಊರುಗೋಲಿನಂತೆ ಜಾಣನಲ್ಲದೆ ಹೋದರೂ, ಅನಿವಾರ್ಯವಾಗಿಯಾದರೂ ತನ್ನ ಕರ್ತವ್ಯಗಳನ್ನು ನಿಭಾಯಿಸುವ ಮಕ್ಕಳು ಎಷ್ಟೋ ಬಾರಿ ಈ ಸಮಾಜದ



ದೃಷ್ಟಿಯಲ್ಲಿ ಏನನ್ನೂ ಮಾಡದ, ಏನನ್ನೂ ಸಾಧಿಸದ ನಿರುಪಯುಕ್ತ ಬದುಕನ್ನು! ಬದುಕುತ್ತಾರೆ..... ಆದರೆ ಅವರ ನಿರುಪಯುಕ್ತತೆಯ ಮೇಲುಹಾಸಿನ ಕೆಳಗೆ ಜವಾಬ್ದಾರಿಯ, ಮಾನವೀಯತೆಯ ಅಂತಸ್ಸತ್ವ ಗಟ್ಟಿಯಾಗಿ ನೆಲೆಯೂರಿರುತ್ತದೆ.

ದೂರದ ಉಪಗ್ರಹ ದೂರದಲ್ಲೇ ಇದ್ದುಕೊಂಡು ಹಣ ಕಳುಹಿಸಬಹುದು, ತಮ್ಮ ಅಭಿಪ್ರಾಯಗಳನ್ನು ಖಚಿತವಾಗಿ ಹೇಳಬಹುದು, ನಿರ್ಣಯಾತ್ಮಕವಾಗಿ ಮಾತನಾಡಬಹುದು.. ಆದರೆ ಹತ್ತಿರದ ಕೈ ನಿಲುಕಿನಲ್ಲಿರುವ ಊರುಗೋಲು ಜೊತೆಯಾಗಿರುತ್ತದೆ, ಸಹಕಾರಿಯಾಗಿರುತ್ತದೆ, ಬಾಗಿ ನಡೆಯುತ್ತದೆ, ಬೆಂಬಲವಾಗಿರುತ್ತದೆ.... ಮೌನದಲ್ಲಿ ತನ್ನೊಳಗನ್ನು ಖಾಲಿ ಮಾಡಿದರೂ ಹೊರಗೆ ಪ್ರಶಾಂತ ಸರೋವರದಂತೆ ಭಾಸವಾಗುತ್ತದೆ.

ನೋಡಿದಿರಾ ಸ್ನೇಹಿತರೆ.... ನಿಮ್ಮ ಸುತ್ತಲೂ ಇಂತಹ ಎರಡು ವಿಭಿನ್ನ ವ್ಯಕ್ತಿತ್ವದ ಜನರನ್ನು ನೀವು ಕಾಣುತ್ತಲೇ ಇರುತ್ತೀರಿ.

ಹಣವನ್ನು ಕಳುಹಿಸುವ ಮೂಲಕ ಆಗಾಗ ಕರೆ ಮಾಡಿ ವಿಚಾರಿಸಿಕೊಳ್ಳುವ ಮೂಲಕ ನೀವು ಪ್ರೀತಿ ಕಾಳಜಿ ಮತ್ತು ಅವರ ಪ್ರಸ್ತುತ ಬದುಕಿನ ಕುರಿತು ಜವಾಬ್ದಾರಿಯನ್ನು ನಿರ್ವಹಿಸುತ್ತಿರುವಿರಿ ಎಂದು ಭಾವಿಸದಿರಿ

ಹಣದ ಮೊತ್ತವನ್ನು ಲಗತ್ತಿಸಿರುವ ಚೆಕಗಳು ಪಾಲಕರ ಕಣ್ಣೀರನ್ನು ಒರೆಸುವುದಿಲ್ಲ. ಕ್ಷೇಮ ಸಮಾಚಾರದ ಕೇಳುವ ಮೂಲಕ ಅವರ ಒಬ್ಬಂಟಿತನವನ್ನು ಹೋಗಲಾಡಿಸಲು ಸಾಧ್ಯವಿಲ್ಲ.

ಅದೊಂದು ದಿನ ನೀವು ನಿಮ್ಮ ಪಾಲಕರು ಉಳಿಸಿಕೊಂಡು ಬಂದಿರುವ ಪೂರ್ವಾರ್ಜಿತ ಆಸ್ತಿಯನ್ನು ಪಾಲು ಮಾಡಿಕೊಳ್ಳುವವರಾದರೆ ಈ ಮಾತನ್ನು ನೆನಪಿಟ್ಟುಕೊಳ್ಳಿ. ಪಾಲಕರನ್ನು ಕಾಳಜಿ ಮಾಡುವ ಮಗನ ಅರೋಗ್ಯ, ಕೌಟುಂಬಿಕ ಜೀವನ, ಸಮಯ ಹಾಗೂ ಬದುಕನ್ನು ಯಾವುದೇ ಆಸ್ತಿಯನ್ನು ಕೊಟ್ಟು ಪೂರೈಸಲು ಸಾಧ್ಯವಿಲ್ಲ.

ಕೌಟುಂಬಿಕ ನ್ಯಾಯ ಎಂದರೆ ಎಲ್ಲವನ್ನು ಸರಿ ಸಮಾನವಾಗಿ ಪಾಲು ಮಾಡಿಕೊಳ್ಳುವುದು ಎಂದರ್ಥವಲ್ಲ. ಇಡೀ ಕುಟುಂಬದ ಭಾರವನ್ನು ಹೊತ್ತು ನಡೆದವರ ಶ್ರಮವನ್ನು, ಸಹಾಯವನ್ನು, ಬದುಕನ್ನು ಕೂಡ ನಾವು ಅರಿಯಲೇಬೇಕು.... ಅರಿತು ಬಾಳಲೇಬೇಕು.

ಈ ಪಾಠ ಕೇವಲ ಪಾಲು ಮಾಡಿಕೊಳ್ಳುವ ಸಹೋದರ, ಸಹೋದರಿಯರಿಗೆ ಮಾತ್ರವಲ್ಲ. ಅವರೇನು ಮಾಡಿದರು ಇವರೇನು ಮಾಡಿದರು ಎಂದು ಹೀಗಳೆಯುವ.... ನಾವೇನು ಸುಮ್ಮನೆ ಕುಳಿತಿಲ್ಲ ಆಗಾಗ ಹಣ ಕಳುಹಿಸಿದ್ದೇವೆ, ಯೋಗ ಕ್ಷೇಮ ವಿಚಾರಿಸಿಕೊಳ್ಳುತ್ತೇವೆ, ಭೇಟಿಯಾಗಿ ಹೋಗುತ್ತೇವೆ ಎಂದು ಹೇಳುವ ಪ್ರತಿಯೊಬ್ಬ ವ್ಯಕ್ತಿಗೆ ಇದು ಪಾಠವಾಗಬೇಕು.

ಏನಂತೀರಾ ಸ್ನೇಹಿತರೇ?

**-ವೀಣಾ ಹೇಮಂತ್ ಗೌಡ ಪಾಟೀಲ್, ಮುಂಡರಗಿ ಗದಗ್**

## ಮಿಸ್ ಇಂಡಿಯಾ ಜೂನಿಯರ್‌ನಲ್ಲಿ ಸಾಧನೆ: ಪೂರ್ವಿಗೆ ಸತ್ಕಾರ




**ಬೀದರ್: ಜ.23:**ರಾಜಸ್ತಾನದಲ್ಲಿ ನಡೆದ 14 ವರ್ಷದ ಒಳಗಿನ ಮಿಸ್ ಇಂಡಿಯಾ ಜೂನಿಯರ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಗಳಿಸಿದ ಜಿಲ್ಲೆಯ ಪೂರ್ವಿ ಬಿರಾದಾರ ಅವರನ್ನು ನಮ್ಮ ಕರ್ನಾಟಕ ಸೇನೆಯಿಂದ ನಗರದಲ್ಲಿ ಬುಧವಾರ ಸನ್ಮಾನಿಸಲಾಯಿತು.

ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಗಣೇಶ ಪಾಟೀಲ ಜ್ಯಾಂತಿ ಅವರು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಿದರು.

ಜಿಲ್ಲೆಯ ಪ್ರತಿಭೆಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಧನೆಗೈಯ್ಯುತ್ತಿದ್ದಾರೆ. ಮಿಸ್ ಇಂಡಿಯಾ ಜೂನಿಯರ್ ಸ್ಪರ್ಧೆಯ ಸಾಂಸ್ಕೃತಿಕ ವಿಭಾಗ ಹಾಗೂ ಗ್ರ್ಯಾಂಡ್ ಫಿನಾಲೆದಲ್ಲಿ ಪೂರ್ವಿ ದ್ವಿತೀಯ ಸ್ಥಾನ ಗಳಿಸಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ ಎಂದು ಹೇಳಿದರು.

ಪೂರ್ವಿ ಅವರ ಸಾಧನೆ ಜಿಲ್ಲೆಯ ಮಕ್ಕಳಿಗೆ ಪ್ರೇರಣೆಯಾಗಲಿದೆ ಎಂದು ತಿಳಿಸಿದರು. ಸೇನೆಯ ಜಿಲ್ಲಾ ಘಟಕದ ಪದಾಧಿಕಾರಿಗಳಾದ ಉದಯ ಅಷ್ಟೂರೆ, ರಾಜಕುಮಾರ ಜಮಾದಾರ್, ಸಂತೋಷ್ ಪಾಟೀಲ, ಅನಿಲ್ ರಾಜಗೀರಾ, ಸಂಗಮೇಶ ಬಿರಾದಾರ, ರಾಜಕುಮಾರ ನೆಲವಾಡ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಕವಿತಾ ಶಿವದಾಸ ಸ್ವಾಮಿ, ಸಂಜುಕುಮಾರ ಬಿರಾದಾರ ಮತ್ತಿತರರು ಇದ್ದರು.

ನೇಮಕ: ಸೇನೆಯ ಜಿಲ್ಲಾ ಘಟಕದ ಕಾರ್ಯದರ್ಶಿಯಾಗಿ ಸಂಗಮೇಶ ಗೌಸಪುರೆ, ಯುವ ಘಟಕದ ಉಪಾಧ್ಯಕ್ಷರಾಗಿ ರಾಜೇಶ್ ಕುಲಕರ್ಣಿ, ಬೀದರ್ ಉತ್ತರ ಮಹಿಳಾ ಘಟಕದ ಅಧ್ಯಕ್ಷರಾಗಿ ಭಾಗ್ಯಶ್ರೀ ಅಮಲಾಪುರೆ ಹಾಗೂ ಬೀದರ್ ದಕ್ಷಿಣ ಘಟಕದ ಉಪಾಧ್ಯಕ್ಷರಾಗಿ ಸುಧೀರ್ ಹೇಡೆ ಅವರನ್ನು ಆಯ್ಕೆ ಮಾಡಲಾಯಿತು.

## ಅಂಗನವಾಡಿಯಲ್ಲಿ ಎಲ್‌ಕೆಜಿ-ಯುಕೆಜಿ ತರಗತಿ ಉದ್ಘಾಟನೆ



**ವಾಡಿ : ಜ.23:**ತಾಲೂಕಿನ ಕಮರವಾಡಿ ಗ್ರಾಮದ ಅಂಗನವಾಡಿ ಕೇಂದ್ರದ ಎರಡರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ನಾಗಮ್ಮ ಸಂಗಶೆಟ್ಟಿ ಅಂಗನವಾಡಿ ಕೇಂದ್ರದಲ್ಲಿ ಎಲ್‌ಕೆಜಿ-ಯುಕೆಜಿ ತರಗತಿ ಉದ್ಘಾಟನೆಗೊಳಿಸುವ ನಿಟ್ಟಿನಲ್ಲಿ ಇಲಾಖೆಯ ಸೌಲಭ್ಯಗಳನ್ನು ವಿವರಿಸಿದರು.

ಅಂಗನವಾಡಿ ಕಾರ್ಯಕರ್ತೆ ನೀಲಮ್ಮ ಶಿರವಾಳ ಅವರು ತಮ್ಮ ಸ್ವಂತ ಖರ್ಚಿನಲ್ಲಿ ಮಕ್ಕಳಿಗೆ ಉಚಿತವಾಗಿ ಪೂರೈಸಲಾದ ಸಮವಸ್ತ್ರ ವಿತರಣೆ ಹಾಗೂ ಪ್ರಾಥಮಿಕ ತರಗತಿ ಸಮಾರಂಭ ಉದ್ಘಾಟಿಸಿ ಮಾತನಾಡಿದ ನಾಗಮ್ಮ ಸಂಗಶೆಟ್ಟಿ, ನಿಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳಿಸುವುದಕ್ಕಿಂತ ಅಂಗನವಾಡಿ ಕೇಂದ್ರದಲ್ಲಿ ಆರಂಭಿಸಲಾದ ಶಾಲೆಗೆ ಕಳುಹಿಸಿಕೊಡಬೇಕು. ಆರ್ಥಿಕ ಸ್ಥಿತಿ ತಗ್ಗಿಸಲು ಸರಕಾರ ಶೈಕ್ಷಣಿಕ ಚಟುವಟಿಕೆಗೆ ಪುಷ್ಟಿ ನೀಡುವ ನಿಟ್ಟಿನಲ್ಲಿ 4-5 ವರ್ಷದ ಮಕ್ಕಳಿಗೆ ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ ಶೈಕ್ಷಣಿಕ ಸೌಲಭ್ಯ ಒದಗಿಸಿದೆ. ಮಕ್ಕಳಿಗೆ ಈಗಾಗಲೇ ಪ್ರವೇಶ ಪ್ರಾರಂಭಿಸಲಾಗಿದ್ದು, ಮಕ್ಕಳು ಮಾನಸಿಕವಾಗಿ, ದೈಹಿಕವಾಗಿ ಸದೃಢತೆ ಹೆಚ್ಚಿಸಲು ಇಲಾಖೆ ಕ್ರಮವಹಿಸಿದೆ ಎಂದು ಹೇಳಿದರು. ಅಂಗನವಾಡಿ ಕೇಂದ್ರಕ್ಕೆ ಬರುವ ಬಾಲ ಮಕ್ಕಳಿಗೆ ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ ಕಲಿಕಾ ಬೋಧನೆ ನೀಡುವುದು ಇದರ ಪ್ರಮುಖ ಉದ್ದೇಶವಾಗಿದೆ. ಮಕ್ಕಳ ಕಲಿಕಾ ಚೇತರಿಕೆ ಜತೆಗೆ ಅರೋಗ್ಯಕ್ಕೂ ಒತ್ತು ನೀಡಲಾಗುತ್ತಿದೆ. ಆಟದ ಮೂಲಕ ಕಲಿಕಾ ಚಟುವಟಿಕೆ ನಡೆಸಲಾಗುತ್ತದೆ. ಮಕ್ಕಳ ಬೌದ್ಧಿಕ ಸಾಮರ್ಥ್ಯ ಹೆಚ್ಚಿಸಲು ಎಲ್‌ಕೆಜಿ, ಯುಕೆಜಿ ಮಕ್ಕಳಿಗಾಗಿ ಪೂರ್ವ ಪ್ರಾಥಮಿಕ ತರಗತಿ ಪ್ರಾರಂಭಿಸಲಾಗಿದೆ. ಖಾಸಗಿ ಶಾಲೆಗಳಿಗೆ ಮಾರು ಹೋಗದೆ ಅಂಗನವಾಡಿ ಕೇಂದ್ರಕ್ಕೆ ನಿಮ್ಮ ಮಕ್ಕಳನ್ನು ಕಳುಹಿಸಬೇಕು ಎಂದು ಮನವಿ ಮಾಡಿದರು.

ಸ್ಥಳೀಯ ಗ್ರಾಪಂ ಅಧ್ಯಕ್ಷೆ ಅನಿತಾ ಹರಿಸಿಂಗ್ ಚವ್ಹಾಣ ಸಭೆಯ ಅಧ್ಯಕ್ಷತೆ ವಹಿಸಿ, ಕೇಂದ್ರದಲ್ಲಿ ಆಯೋಜಿಸಿದ್ದ ನಿಜಶರಣ ಅಂಬಿಗರ ಚೌಡಯ್ಯನವರ ಭಾವಚಿತ್ರಕ್ಕೆ ಪೂಜೆ ಕಾರ್ಯಕ್ರಮ ನೆರವೇರಿಸಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯಶಿಕ್ಷಕಿ ಮಂಜುಳಾ ಕುಲಕರ್ಣಿ ಮಾತನಾಡಿದರು. ಅಂಗನವಾಡಿ ಕಾರ್ಯಕರ್ತೆ ಶಿವಲಿಂಗಮ್ಮ ಗಂಗನೋರ, ಚಂಪಾ ಕುಲಕರ್ಣಿ, ಲಕ್ಷ್ಮಿ ಕಾಂಬಳೆ, ಗ್ರಾಮದ ಹಿರಿಯ ಮುಖಂಡ ಶಿವಶರಣಪ್ಪ ಶಿರವಾಳ, ಪತ್ರಕರ್ತ ರಾಯಪ್ಪ ಕೊಟಗಾರ ಸೇರಿದಂತೆ ಪೋಷಕರು ಭಾಗವಹಿಸಿದ್ದರು. ರೈತ ಸಂಘದ ಮುಖಂಡ ಬಸವರಾಜ ಸುಲೆಪೇಠ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಅಂಗನವಾಡಿ ಕೇಂದ್ರದ ಹದಿನೆಂಟು ಮಕ್ಕಳಿಗೆ ಕಾರ್ಯಕರ್ತೆ ನೀಲಮ್ಮ ಶಿರವಾಳ ಅವರು ತಮ್ಮ ಸ್ವಂತ ಖರ್ಚಿನಲ್ಲಿ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರ ವಿತರಿಸಿ ಗ್ರಾಮಸ್ಥರ ಗಮನ ಸೆಳೆದರು.

# ಮನರೇಗಾ ಯೋಜನೆ ಮರು ನಾಮಕರಣದಿಂದಾಗುವ ಸಮಸ್ಯೆ ಕುರಿತು ಜನರಿಗೆ ಜಾಗೃತಿ ಮೂಡಿಸಿ : ವಿನಯ ಕುಮಾರ್ ಸೊರಕೆ

**ಹುಬ್ಬಳ್ಳಿ,ಜ.23–** ಇಂದು ಭಾರತೀಯ ಜನತಾ ಪಕ್ಷದ ಎನ್‌ಡಿಎ ಅತ್ಯಂತ ಕೆಟ್ಟ ಹಾಗೂ ಜನವಿರೋಧಿ ಆಡಳಿತ ನಡೆಸುತ್ತಿದ್ದು ತನ್ನ ಲಾಭಕ್ಕಾಗಿ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಹೆಸರು ಬದಲಾವಣೆ ಮಾಡಿದೆ ಎಂದು ಇದರ ವಿರುದ್ಧ ಜನಾಂದಲೋನ ರೀತಿಯಲ್ಲಿ ಹೋರಾಟ ಅಗತ್ಯ ಇದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಸಚಿವ ವಿನಯಕುಮಾರ ಸೊರಕೆ ಹೇಳಿದರು.

ನಗರದ ಮಂತ್ರಾ ರೆಸಿಡೆನ್ಸಿ ಹೊಟೇಲ್ ನಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಹಾಗೂ ಗ್ರಾಮೀಣ ಜಿಲ್ಲೆಗಳ ಪ್ರಚಾರ ಸಮಿತಿ ಸದಸ್ಯರಿಗೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದವರು ಬಹುತಮವಿದೆ ಎನ್ನುವ ಕಾರಣಕ್ಕೆ ಸಂವಿಧಾನಕ್ಕೆ ವಿರುದ್ಧವಾಗಿ ಮಸೂದೆಗಳನ್ನು ಮಾಡುತ್ತಿದ್ದಾರೆ. ದೇಶದ ಸ್ವಾತಂತ್ರ್ಯಕ್ಕೆ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ಮಹಾತ್ಮಗಾಂಧಿ ಅವರ ಹೆಸರನ್ನು ಇತಿಹಾಸದಿಂದ ತೆಗೆದುಹಾಕುವ ಕೆಲಸಕ್ಕೆ ಮುಂದಾಗಿದ್ದಾರೆ.

ಹಿಂದಿನ ನಮ್ಮ ಸರಕಾರ ದೇಶದ ಜನರ ಕಲ್ಯಾಣಕ್ಕಾಗಿ ತಂದಿದ್ದ 33 ಕಾರ್ಯ ಕ್ರಮಗಳನ್ನು ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರದ್ದು ಮಾಡಿದೆ. ಇತ್ತೀಚೆಗೆ ಮನರೇಗಾ ಯೋಜನೆಯನ್ನು ರದ್ದು ಮಾಡಿ ಗ್ರಾಪಂಗಳ ಅಧಿಕಾರವನ್ನು ಸಂಪೂರ್ಣವಾಗಿ ಕಿತ್ತುಕೊಂಡಿದ್ದಾರೆ. ಗ್ರಾಮಗಳ ಅಭಿವೃದ್ಧಿಯನ್ನು ದೆಹಲಿಯ ಕಾರ್ಪೋರೇಟ್ ಕೈಗೆ ನೀಡಿದ್ದಾರೆ.
ನಾವು ಶೇ.95 ರಷ್ಟು ಕೆಲಸ ಮಾಡಿದ ಶೇ. 5ರಷ್ಟು ಪ್ರಚಾರ ಪಡೆಯುವುದಿಲ್ಲ. ಆದರೆ ವಿಪಕ್ಷದವರು ಶೇ.5 ರಷ್ಟು ಕೆಲಸ ಮಾಡಿ ಶೇ.95 ರಷ್ಟು ಪ್ರಚಾರ ಪಡೆಯುತ್ತಾರೆ. ರಾಜ್ಯದಲ್ಲಿ ಪ್ರಚಾರ ಸಮಿತಿ ಅಡಿಯಲ್ಲಿ ಕನಿಷ್ಠ ಒಂದು ಲಕ್ಷ ಸದಸ್ಯರಾಗಬೇಕು



ಎನ್ನುವ ಗುರಿಯಿದೆ. ಎಲ್ಲರೂ ಒಗ್ಗೂಡಿದಾಗ ಮಾತ್ರ ಜನದ್ರೋಹಿ ಪಕ್ಷಗಳನ್ನು ಅಧಿಕಾರದಿಂದ ದೂರವಿಡಬಹುದಾಗಿದೆ ಎಂದರು.

ಮಾಜಿ ಸಂಸದ ಪ್ರೊ. ಐ.ಜಿ.ಸನದಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ದೇಶದಲ್ಲಿ ಸುಖ, ಶಾಂತಿ ನೆಲೆಸಿ ಜನ ಕಲ್ಯಾಣ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ . ಜನರ ಸುದೀರ್ಘ ಆಡಳಿತದಲ್ಲಿ ಸೋಲು ಗೆಲವು ಕಂಡಿದ್ದೇವೆ. ಹಿಂದೆ ಕಾಂಗ್ರೆಸ್ ಸೋತಾಗ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು ಎಲ್ಲಾ ಜಿಲ್ಲೆಗಳ ಅಧ್ಯಕ್ಷರನ್ನು ದೆಹಲಿಗೆ ಕರೆಯಿಸಿ ರಾಜಕೀಯ ಪುನಶ್ಚೇತನ ಕಾರ್ಯಾಗಾರ ಮಾಡಿದ್ದರು. ಅಂತಹ ಕಾರ್ಯಾಗಾರಗಳು, ತರಬೇತಿಗಳು ಪಕ್ಷಕ್ಕೆ ಅಗತ್ಯವಿದೆ ಎಂದರು.

ಕೆಪಿಸಿಸಿ ಮುಖ್ಯ ಸಂಯೋಜಕ ಸುಧೀರಕುಮಾರ ಮುರೊಳ್ಳಿ ನಮ್ಮ ಸರಕಾರದ ಜನ ಕಲ್ಯಾಣ ಯೋಜನೆಗಳನ್ನು ಅವರು ರಾಜಕೀಯ ಕೋಮುವಾದ ಹಾಗೂ ಭಾರತದ ಸಾಮರಸ್ಯ ಕುರಿತು ವಿಷಯ ಮಂಡನೆ ಮಾಡಿ ಮಾತನಾಡಿ ಇಂದು ಭಾರತೀಯ ಜನತಾ ಪಕ್ಷದ ನೇತೃತ್ವದ ಕೇಂದ್ರ ಸರ್ಕಾರದ ಸ್ವಾರ್ಥ ಆಡಳಿತ ಹಾಗೂ ಧರ್ಮ ಧರ್ಮಗಳ ನಡುವೆ ಜಾತಿ, ಮತ ಹಾಗೂ ಪಂಥಗಳ ವಿಷ ಬೀಜ ಬಿತ್ತಿ ಒಡೆದು ಆಳುವ ನೀತಿ ಅನುಸರಿಸುತ್ತಿದೆ ಎಂದರು.

ಭಟ್ಕಳ ಮಾಜಿ ಶಾಸಕ ಜೆ.ಡಿ.ನಾಯ್ಕ ಮಾತನಾಡಿ, ಮನೇಗ್ರಾ ಯೋಜನೆ ಮನೇಗ್ರಾ ಮರು ನಾಮಕರಣದ ಬಗ್ಗೆ ಮುಂದೆ ಆಗುವ ಸಮಸ್ಯೆಗಳ ಕುರಿತು ಫಲಾನುಭವಿಗಳಿಗೆ ಮುಟ್ಟಿಸಬೇಕು, ಯೋಜನೆ ಕುರಿತು ಜನರಿಗೆ ಮಾಹಿತಿ ನೀಡುವ ಕೆಲಸ ಆಗಬೇಕು. ಪಕ್ಷದಲ್ಲಿ ಚಟುವಟಿಕೆಯಿಂದ ಇರುವಂತಹ ಪ್ರಮುಖರನ್ನು ಗುರುತಿಸಿ ಪ್ರಚಾರ ಸಮಿತಿಗೆ ಸೇರಿಸಿಕೊಂಡು ಜವಬ್ದಾರಿ ನೀಡಬೇಕು. ಪ್ರಚಾರ ಸಮಿತಿಯ ಜವಬ್ದಾರಿ ಹಾಗೂ ಕಾರ್ಯಗಳನ್ನು ಅರಿತು ಕೆಲಸ ಮಾಡಬೇಕು ಎಂದರು.

ರಾಜ್ಯಸಭಾ ಮಾಜಿ ಸದಸ್ಯ ಹಾಗೂ ಪ್ರಚಾರ ಸಮಿತಿ ಸಹ ಅಧ್ಯಕ್ಷ ಡಾ. ಎಲ್. ಹನುಮಂತಯ್ಯ ಹಾಗೂ ಸಮಿತಿ ಉಪಾಧ್ಯಕ್ಷ ಅಬ್ದುಲ್ ಮುನೀರ್ ವಿವಿಧ ವಿಷಯುಗಳ ಕುರಿತು ಮಾತನಾಡಿದರು. ಹುಬ್ಬಳ್ಳಿ ಧಾರವಾಡಗ್ರಾಮೀಣ ಜಿಲ್ಲಾಧ್ಯಕ್ಷ ಅನೀಲಕುಮಾರ ಪಾಟೀಲ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸದಾನಂದ ಡಂಗನವರ, ಮಾಜಿ ವಿಧಾನ ಪರಿಷತ್ ಸದಸ್ಯ ಮೋಹನ ಲಿಂಬಿಕಾಯಿ, ಹುಡಾ ಅಧ್ಯಕ್ಷ ಶಾಕೀರ ಸನದಿ, ಧಾರವಾಡ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಹಾಗೂ ಕೆಪಿಸಿಸಿ ಸದಸ್ಯ ಚಂದ್ರಶೇಖರ ಜುಟ್ಟಲ್, ಮುಖಂಡರಾದರಾಜಾದೇಸಾಯಿ, ಶರಣಪ್ಪ ಕೊಟಗಿ,ಸುನಿತಾ ಹುರಕಡ್ಲಿ, ಜ್ಯೋತಿ ಪಾಟೀಲ, ಸುರೇಖಾ ಹಾಗೂ ವಿವಿಧ ಸಮಿತಿ ಪದಾಧಿಕಾರಿಗಳು ಅನೇಕ ಕಾರ್ಯಕರ್ತರು ಇದ್ದರು.

## ಜೈಲಲ್ಲಿ ತಟ್ಟೆ, ಲೋಟ, ನೋಡಿದ ರೆಡ್ಡಿಗೆ ರಾಜಕೀಯ ಚಮಚಾಗಿರಿ ಬಿಟ್ಟು ಬೇರೇನೂ ಗೊತ್ತಿಲ್ಲ : ಹರಿಪ್ರಸಾದ್ ತಿರುಗೇಟು



**ಬೆಂಗಳೂರು,ಜ.23–** ಜೈಲಲ್ಲಿ ತಟ್ಟೆ, ಲೋಟ, ಚಮಚಾಗಳನ್ನು ಬಿಟ್ಟು ಬೇರೆ ಜಗತ್ತು ನೋಡದ ಶಾಸಕ ಜನಾರ್ದನ ರೆಡ್ಡಿ ಅವರಿಗೆ ರಾಜಕೀಯ ಜೀವನದಲ್ಲಿ ಚಮಚಾಗಿರಿ ಹೊರತುಪಡಿಸಿ ಬೇರೆ ಲೋಕದ ಪರಿಜ್ಞಾನವೇ ಇಲ್ಲ ಎಂದು ಕಾಂಗ್ರೆಸ್‌ನ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಲೇವಡಿ ಮಾಡಿದ್ದಾರೆ.

ತಲೆ ಮೇಲೆ ಕೈ ಇರಿಸಿಕೊಂಡಿದ್ದು ಸಾಲದೆಂಬಂತೆ ಕೇಂದ್ರದ ಮಾಜಿ ಸಚಿವೆ ಸುಷಾ ಸ್ವರಾಜ್ ಅವರ ಪಾದ ಪೂಜೆ ಮಾಡಿ ನೀರು ಕುಡಿದು ರಾಜಕೀಯ ಲಾಭ ಗಿಟ್ಟಿಸಿಕೊಂಡ ರೆಡ್ಡಿಗೆ ಪಾದ ಪೂಜೆಯ ನೀರು ನೆತ್ತಿಗೇರಿರಬೇಕು. ಅದಕ್ಕೆ ಅಮಿತ್ ಶಾ ತಲೆ ಮೇಲೆ ಕುಟ್ಟಿ ಬಿಜೆಪಿಗೂ ಈ ಜೈಲುವಾಸಿ ರೆಡ್ಡಿಗೂ ಸಂಬಂಧ ಇಲ್ಲ ಅಂತಾ ಬಹಿರಂಗವಾಗಿ ಹೇಳಿದ್ದನ್ನು ಮರೆತಂತಿದೆ ಎಂದು ತಿರುಗೇಟು ನೀಡಿದ್ದಾರೆ.

ಒಮೆ ಜೀವದ ಗೆಳೆಯ ಅನ್ನೊದು, ಇನ್ನೊಮೆ ಶ್ರಿರಾಮುಲು ವಿರುದ್ಧವೇ ಮಸಲತ್ತು ಮಾಡುವ ಜನಾರ್ದನ ರೆಡ್ಡಿಯ ಊಸರವಳ್ಳಿ ಆಟ ರಾಜ್ಯದ ಜನ ಮರೆತಿಲ್ಲ. ಸಹೋದರರನ್ನೆ ರಾಜಕೀಯವಾಗಿ ಮುಗಿಸಲು ಹೊರಟ ಜನಾದರ್ನ ರೆಡ್ಡಿಯ ಮೂರು ಕಾಸಿಗೂ ಕಿಮತ್ತಿಲ್ಲದ ತಂತ್ರಗಾರಿಕೆ ಬಗ್ಗೆ ಶ್ರಿರಾಮುಲು ಆಡಿರುವ ಒಂದೊಂದು ಆಣಿಮುತ್ತುಗಳೇ ಸಾಕು. ಸಾಧ್ಯವಾದರೆ ಎಣಿಸಿಕೊಳ್ಳಲಿ ಎಂದಿದ್ದಾರೆ.

ರೆಡ್ಡಿಗಾರು ನಾನು ವಾರ್ಡ್ ಚುನಾವಣೆ ಗೆದ್ದಿಲ್ಲ ನಿಜ. ಆದರೆ ಹಿಂಬಾಗಿಲೋ ಮುಂಬಾಗಿಲೋ ನಾನಂತೂ ರಾಜಾರೋಷವಾಗಿ ಬಂದಿದ್ದೇನೆ. ಚುನಾವಣೆಯ ಎರಡು ದಿನದ ಹಿಂದಿನ ಕತ್ತಲೆ ರಾತ್ರಿಯ ರಹಸ್ಯವಾಗಿಯಂತೂ ಬಂದಿಲ್ಲ, ಬರುವುದೂ ಇಲ್ಲ. ಆದರೆ 224 ವಿಧಾನಸಭಾ ಕ್ಷೇತ್ರದಲ್ಲಿ ಜಾತಿ, ಹಣ, ಇಲ್ಲದೆ ಚುನಾವಣೆ ಎದುರಿಸುವುದಕ್ಕೆ ರೆಡಿ. ಧೈರ್ಯ, ತಾಕತ್ತು ಇದ್ದರೆ ಪ್ರಾಮಾಣಿಕವಾಗಿ ಚುನಾವಣೆ ನಡೆಸುವ ಕಿಂಚಿತ್ತಾದರೂ ಎದೆಗಾರಿಕೆ ಇದ್ದರೆ ಮುಂದೆ ಬರಲಿ ಎಂದು ಸವಾಲು ಹಾಕಿದ್ದಾರೆ.

ನಮ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ನ್ಯಾಷನಲ್ ಹೆರಾಲ್ಡ್ ಪತ್ರಿಕೆ ವಿರುದ್ಧ ಸುಳ್ಳು ಕೇಸ್ ಹಾಕಿರೋದಕ್ಕೆ ಹೈಕೋರ್ಟ್ ಛೀಮಾರಿ ಹಾಕಿರುವುದು ಸಾಕಾಗಿಲ್ಲವೇ?. ನ್ಯಾಯಾಧೀಶರನ್ನೆ ಹತ್ತು ಕೋಟಿ ಡೀಲ್ ಮಾಡಿ ಬೇಲ್ ತೆಗೆದುಕೊಂಡ ಹಾಗೇ ಅಂದುಕೊಂಡ್ರಾ ? ನಮ ನಾಯಕರು ಸುಳ್ಳು ಕೇಸ್ ಹಾಕಿಸಿಕೊಂಡು ಓಡಾಡುತ್ತಿರಬಹುದು. ಆದರೆ ಕೊಲೆ ಕೇಸ್‌ಗಳಲ್ಲಿ ಸುಪ್ರಿಂಕೋರ್ಟ್‌ನಿಂದ ಗಡೀಪಾರಂತೂ ಆಗಿಲ್ಲ ಎಂದು ಹೇಳಿದ್ದಾರೆ.

ಅವರಿವರ ಕೈ ಕಾಲು ಹಿಡಿದು ಬಿಜೆಪಿ ಸೇರಿ ನೆಲೆ ಇಲ್ಲದೆ ಬಿಲ ಹುಡುಕಾಡುವ ದಯನೀಯ ಸ್ಥಿತಿ ಜನಾರ್ದನ ರೆಡ್ಡಿಗೆ ಬಂದಿದೆ. ಆದರೂ, ಶೇಷ–ಅವಶೇಷಗಳ ಬಗ್ಗೆ ಮಾತಾಡೋದು ಹಾಸ್ಯಾಸ್ಪದ. ಇನ್ನೂ ಈಗಾಗಲೇ ಜೈಲು, ಡೀಲು, ಬೇಲುಗಳ ಬಗ್ಗೆ ಮಾತ್ರ ಮಾತಾಡಿದ್ದೆ, ಆದರೆ ಇನ್ನೂ ಎಳೆ ಎಳೆಯಾಗಿ ಬಿಚ್ಚಿಡೋದಕ್ಕೆ ನಾನಂತೂ ರೆಡಿ ಎಂದು ಪಂಥಾಹ್ವಾನ ನೀಡಿದ್ದಾರೆ.

# 12 ಲಕ್ಷ ರೂ.ವಂಚನೆ

**ಕಲಬುರಗಿ,ಜ.23–**ನೀವುಕೊಟ್ಟ ಹಣ ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಿ ಲಾಭ ಮಾಡಿಕೊಡುತ್ತೇನೆ ಎಂದು ಹೇಳಿ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬ ಮೂವರಿಗೆ 12 ಲಕ್ಷ ರೂಪಾಯಿ ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.
ನಗರದ ಮುಸ್ಲಿಂ ಚೌಕ್‌ನ ಮಹ್ಮದ್ ತೌಸಿಫ್ ಪಟೇಲ್ ಎಂಬಾತನೆ ವಂಚನೆ ಮಾಡಿದ್ದಾನೆ ಎಂದು ಮೋಮಿನಪುರದ ಮೊಹ್ಮದ್ ಇಂತೆಸಾರ ಚೌಕ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.ರಿಯಲ್ ಎಸ್ಟೇಟ್ ಉದ್ಯಮಿಯಾದ ತೌಸಿಫ್ ಪಟೇಲ್ ಎಂಬಾತ ಮೊಹ್ಮದ್ ಇಂತೆಸಾರ ಅವರಿಂದ 3 ಲಕ್ಷ, ಸಮೀನಾ ಬೇಗಂ ಎಂಬುವವರಿಂದ 5 ಲಕ್ಷ ಮತ್ತು ಅಫರಾ ಅಲ್ಮಾನ್ ಎಂಬುವವರಿಂದ 4 ಲಕ್ಷ ಸೇರಿ 12 ಲಕ್ಷ ರೂಪಾಯಿಗಳನ್ನು ತನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಿಸಿಕೊಂಡು ನೀವು ಕೊಟ್ಟ ಹಣ ರಿಯಲ್ ಎಸ್ಟೇಟ್‌ನಲ್ಲ ಹೂಡಿಕೆ ಮಾಡಿ ಲಾಭ ಮಾಡಿಕೊಡುತ್ತೇನೆ ಎಂದು ಅವರನ್ನು ನಂಬಿಸಿ ಹಣ ಮರಳಿ ಕೊಡದೆ ಮತ್ತು ಪದೇ ಪದೇ ಹಣ ಕೇಳಿದರೆ ನಿಮ್ಮ ಹೆಸರಿನಲ್ಲಿ ಚೀಟಿ ಬರೆದಿಟ್ಟು ಸಾಯುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

## 'ರಾಮನಿಗಿಂತ ಗಾಂಧೀ ದೊಡ್ಡವರಾ..?' ಎಂಬ ಚರ್ಚೆ ಹುಟ್ಟು ಹಾಕಿದೆ ಬಿಜೆಪಿ : ಸುಧೀರ್‌ಕುಮಾರ ಮುರೋಳ್ಳಿ

**ಹುಬ್ಬಳ್ಳಿ, ಜ.23:** ಕೇಂದ್ರ ಸರ್ಕಾರ ಒಂದು ಬಡವರ ,ಜನಪರ ಯೋಜನೆಯ ಹೆಸರನ್ನ ಬದಲಾವಣೆ ಮಾಡುವ ಮೂಲಕ ಅನೇಕ ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಿದ್ದು ಮನ್ರೆಗಾ ಯೋಜನೆಯ ಹೆಸರನ್ನ ಬದಲಾವಣೆ ಮೂಲಕರಾಮನಿಗಿಂತ ಗಾಂಧೀ ದೊಡ್ಡವರಾ ಎಂಬ ಚರ್ಚೆಗೆ ಅಂತಾ ಚರ್ಚೆಗೆ ಬಿಜೆಪಿ ಅವಕಾಶ ಹುಟ್ಟು ಹಾಕಿದೆ ಎಂದು ಕೆಪಿಸಿಸಿ ಸಮಿತಿ ಪ್ರಚಾರ ಸಮಿತಿ ರಾಜ್ಯ ಮುಖ್ಯ ಸಂಯೋಜಕ ಸುಧೀರ್ ಕುಮಾರ್ ಮುರೋಳ್ಳಿ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿಂದು ಸುದ್ದಿಗಾರರ ಜೊತೆಗೆ ಅವರು ಮಾತನಾಡಿದರು,ಕೇಂದ್ರ ಸರ್ಕಾರ ಮನ್ರೆಗಾ ಜೀ ರಾಮ ಜೀ ಎಂದು ಮರುನಾಮಕರಣ ವಿಚಾರವಾಗಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು ಗ್ರಾಮ ಸ್ವರಾಜ್ಯದ ಕನಸು ಕಂಡಿವರು ಮಹಾತ ಗಾಂಧೀಯವರು ಅವರು ಡಾ.ಬಾಬಾಸಾಹೇಬ ಅಂಬೇಡ್ಕರ್ ನೇತೃತ್ವದಲ್ಲಿ ಸಂವಿಧಾನ ಸ್ವಿಕಾರ ಮಾಡಲಾಯಿತು.

ನಂತರ ಗ್ರಾಮ ಸ್ವರಾಜ್ಯ ಗ್ರಾಮ ಆಡಳಿತ , ಅಧಿಕಾರ ವಿಕೇಂದ್ರೆಕರಣ ಕುರಿತು ಬಹಳ ದೊಡ್ಡ ಆಂದೋಲನ ಹಾಗೂ ಚರ್ಚೆ ನಡೆಸಲಾಯಿತು . ನಾವು ಭಾರತದಲ್ಲಿ ಮೂರು ವಿಧದ ಆಡಳಿತ ವ್ಯವಸ್ಥೆ ನೋಡ್ತಾ ಇದ್ದೇವೆ ಈ ಸಂಸ್ಥೆಗಳಿಗೆ ಕಾಂಗ್ರೆಸ್ ಸರಕಾರ ಮಾನ್ಯತೆ ನೀಡಿತು ನಂತರ ವಿದರ್ಭದಲ್ಲಿ ರೈತ ಆತಹತ್ಯೆ ನಡೆದಾಗ ಬಹಳ ಚರ್ಚೆಗೆ ಗ್ರಾಸವಾಯಿತು ಇದು ಸಾಕಷ್ಟು ಬದಲಾವಣೆಗೆ ಸಹ ಅವಕಾಶ ಮಾಡಿಕೊಟ್ಟಿತು.

ನಂತರ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ರೈತರ ನೆರವಿಗೆ ಬಂದು ಉದ್ಯೋಗ ಖಾತ್ರಿ ಯೋಜನೆ ಜಾರಿ ಮಾಡಲಾಯಿತು. ಈ ಯೋಜನೆ ಒಂದು ಮಹತ್ವದ, ಕ್ರಾಂತಿಕಾರ ಬದಲಾವಣೆಗೆ ಕಾರಣವಾಗುವ ಮೂಲಕ ವಿಶ್ವದ ಯೋಜನೆ ಮಹಾತ ಗಾಂಧೀ ಜಿ ಉದ್ಯೋಗ ಖಾತ್ರಿ ಯೋಜನೆ ಜಾರಿ ತರಲಾಯಿತು. ಕಾಂಗ್ರೆಸ್ ಸರಕಾರ ಮಹಾತ ಗಾಂಧೀಯವರ ಹೆಸರಿನಲ್ಲಿ ಜಾರಿ ಮಾಡಿತು ಆವಾಗ ದೇಶದಲ್ಲಿ ಅಂದು ಯಾರಿಂದಲೂ ವಿರೋಧ ಬಂದಿರಲಿಲ್ಲಅಂದು ಸ್ವತ ಈಗಿನ ಪ್ರಧಾನಿ ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಗಳು ಸಹ ಆಗಿದ್ದರುಅಂದು ನರೇಂದ್ರ ಮೋದಿ ಆಗಲಿ ಯಾವುದೇ ಬಿಜೆಪಿ ನಾಯಕರು ವಿರೋಧ ಮಾಡಲಿಲ್ಲ ಏಕೆಂದರೆ ಇದೊಂದು ಅತ್ಯಂತ ಜನೋಪಯೋಗಿ ಯೋಜನೆ ಆಗಿತ್ತುಮನ್ರೆಗಾ ಯೋಜನೆ ಆಡಳಿತ ಜನರ ಕೈಯಲ್ಲಿ ಯಾರು ಬಡವರು,ಕೂಲಿ ಕಾರ್ಮಿಕರ ಕೈಯಲ್ಲಿತ್ತು ಇದರಿಂದಾಗಿ ಸ್ಥಳೀಯ ಆಡಳಿತಕ್ಕೆ ಹೋಗಿ ಹತ್ತು ಜನರು ಜಾಬ್ ಕಾರ್ಡ್ ಮೂಲಕ ಕೆಲಸ ಕೊಡಿ ಅಂದಾಗ ಕೆಲಸ ಕೊಡಲಾಯಿತು.

ಸಾಕಷ್ಟು ಜನರು ಈ ಯೋಜನೆಯನ್ನ ಮನಸಾರೆ ಒಪ್ಪಿಕೊಂಡರು. ಕಾಂಗ್ರೆಸ್ ಸರಕಾರ ನಿರಂತರವಾಗಿ ಎರಡು ಸಲ ಅಧಿಕಾರ ಮಾಡಿತು ಮನ್ರೆಗಾ ಯೋಜನೆಯಿಂದ ಗ್ರಾಮದಲ್ಲಿ ಅಭಿವೃದ್ಧಿ, ಬಡವರ ಬದುಕು ಹಸನಾಗಲು ಸಹಕಾರಿ ಆಯಿತು ಉದ್ಯೋಗ ಇಲ್ಲದ ಕೈಗಳಿಗೆ ಉದ್ಯೋಗ ಕೊಡಲಾಯಿತು. ಹಸಿದ ಹೊಟ್ಟೆಗೆ ಅನ್ನ ನೀಡಲಾಯಿತು ಆದರೆ ಈಗ ಕೇಂದ್ರ ಸರಕಾರ ಮನ್ರೆಗಾ ಯೋಜನೆ ಹೆಸರು ಬದಲಾವಣೆ ಮಾಡಿ ರಾಮನಿಗೆ ಅವಮಾನ ಮಾಡಿತು ರಾಮ ಎಂದರೆ ಒಂದು ಆಗಾಧ ವ್ಯಕ್ತಿತ್ವ ರಾಮ ಎಂಬ ವ್ಯಕ್ತಿತ್ವಕ್ಕೆ ಅವಮಾನ ಮಾಡಿತು.

ರಾಮ ಅಂತಾ ಹೆಸರು ಬದಲಾವಣೆ ಮಾಡಿ ವಿಜೀ



ರಾಮಜೀ ಅಂತಾ ಹೆಸರು ಬದಲಾವಣೆ ಮಾಡಲಾಯಿತು. ಈಗ ವೀಜಿ ರಾಮಜೀ ಅಂತಾ ವಿಸತದಲ್ಲಿ ಯಾವುದೇ ಅರ್ಥ ಇಲ್ಲ ನಿಜವಾದ ರಾಮನಿಗೆ ಯಾವುದೇ ಮಹತ್ವ ಇಲ್ಲ ಇನ್ನು ರಾಮನಿಗಿಂತ ಗಾಂಧೀ ದೊಡ್ಡವರು ಅಂತಾ ಚರ್ಚೆ ಹುಟ್ಟು ಹಾಕಲಿಕ್ಕೆ ಬಿಜೆಪಿ ಅವಕಾಶ ಮಾಡತಾ ಇದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.
ಮನ್ರೆಗಾ ಯೋಜನೆಯಲ್ಲಿ ಮಹಾತ ಗಾಂಧೀಯವರ ಹೆಸರು ತೆಗೆದು ಹಾಕಿದ್ದು ಹಿಂಪಡೆದಿದ್ದು ಎಷ್ಟು ಗಾಂಧೀ ವಿರೋಧಿಗಳು ಅಂತಾ ಗೊತ್ತಾಗುತ್ತದೆಯಾವ ಊರಿನಲ್ಲಿ ಅತ್ಯಂತ ಕಡಿಮೆ ಬೆಳೆ ಬೆಳೆಯಲಾಗುತ್ತದೆ ಅಲ್ಲಿ ಈಗಿನ ಯೋಜನೆ ಜಾರಿ ಮಾಡಲ್ಲ ಅಂತಾ ಕಾಯ್ದೆ ಜಾರಿ ಮಾಡಲಾಗಿದೆ ಗ್ರಾಮದಲ್ಲಿ ಇರಬಹುದಾದ ಪಾಳೆಗಾರಿಕೆಯನ್ನ ದೂಡಲು ಮತ್ತೆ ಇದು ಮಾಡಲಾಗುತ್ತದೆ.

ಜನರ ಪರಮಾಧಿಕಾರದಿಂದ ಕೇಂದ್ರ ಸರ್ಕಾರದ ಪರಮಾಧಿಕಾರಕ್ಕೆ ನೀಡಲಾಯಿತು ಇನ್ನು
ಕೆಲಸ ಕೊಡಬೇಕಿತ್ತು ಇದರ ಜೊತೆಗೆ ಕೂಲಿ ಕೊಡಬೇಕಿತ್ತು. ಈಗ ಕೆಲಸ ಕೇಂದ್ರ ಸರ್ಕಾರ ಕೊಡಬಹುದು ಇಲ್ಲ ಕೊಡದೇ ಇರಬಹುದು ಇದೊಂದು ಸರ್ವಾಧಿಕಾರಿ ಧೋರಣೆಯ ಯೋಜನೆ ಆಗಿ ಪರಿವರ್ತನೆ ಮಾಡಲಾಯಿತು ಎಂದ ಅವರು ಭಾರತದ ಗ್ರಾಮಗಳ ವ್ಯವಸ್ಥೆ ಅರ್ಥ ಮಾಡಿಕೊಳ್ಳದೇ ಕಾಯ್ದೆ ಜಾರಿ ಮಾಡಲಾಗಿದ್ದು ಅತಿಯಾದ ತಾಂತ್ರಿಕತೆಗೆ ಮಹತ್ವ ಕೊಡಲಾಗಿದೆ ಬಡವರ ಹೊಟ್ಟೆಗೆ ಹೊಡೆಯುವ ಕೆಲಸ ಹೊಸ ಕಾಯ್ದೆ ಮಾಡ್ತಾ ಇದೆ.

ಕೇಂದ್ರ ಸರ್ಕಾರ ಮೊದಲು 100 ಕ್ಕೆ 100 ಇದ್ದ ಹೊಣೆಗಾರಿಕೆಯನ್ನು ಬದಲಾವಣೆ ಮಾಡಿಈಗ ಶೇಕಡಾ 60 ಕೇಂದ್ರ ಸರ್ಕಾರ ಇನ್ನು ಶೇಕಡಾ 40 ರಾಜ್ಯ ಸರ್ಕಾರದ ಹೊಣೆಗಾರಿಕೆಗೆ ಹಂಚಲಾಗಿದೆ ಇದೊಂದು ಅತ್ಯಂತ ವ್ಯವಸ್ಥಿತವಾದ ಪಿತೂರಿ ಆಗಿದ್ದುಕೇಂದ್ರ ಹಾಗೂ ರಾಜ್ಯದ ಹೊಣೆಗಾರಿಕೆಯಲ್ಲಿಯೇ ಯೋಜನೆ ಮುಗಿದು ಹೋಗಬೇಕು ಹಳ್ಳಿಗಳ ಹಾಗೂ ಗ್ರಾಮೀಣ ಭಾರತ ನಾಶ ಮಾಡಬೇಕು ಎನ್ನುವ ಹುನ್ನಾರ ಆಗಿದ್ದುಮೊದಲು ಮಹಾತ ಗಾಂಧೀ ಉದ್ಯೋಗ ಖಾತ್ರಿ ಯೋಜನೆ ನ್ಯಾಯಪರ, ಜನರ ಪರ ಹಾಗೂ ಬಡವರ ಪರ ಇತ್ತು ಆದರೆ ಇಂದು ಕೇಂದ್ರ ಸರ್ಕಾರದ ಅಧೀನದಲ್ಲಿ ಬಂದು ಮೂ ಆಶಯಕ್ಕೆ ಧಕ್ಕೆ ತರಲಾಗಿದೆ ಎಂದರು.
ರಾಜ್ಯ ಸಭಾ ಮಾಜಿ ಸದಸ್ಯ ಎಲ್ ಹನುಮಂತಯ್ಯ, ಧಾರವಾಡ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಚಂದ್ರಶೇಖರ ಜುಟ್ಟಲ್, ಮುಖಂಡರಾದ ತನ್ವಿರ್ ಕೊಪ್ಪದ ಮುಂತಾದವರು ಇದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE